2018 ಕ.ತೀ.ವ 18

**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಮೋಹನ್ ಎಂ. ಶಾಂತನಗೌಡರ್**
**ಮತ್ತು**
**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬೂದಿಹಾಳ್ ಆರ್.ಬಿ.**

ಕರ್ನಾಟಕ ರಾಜ್ಯ (ಸಿ.ಪಿ.ಐ ಮೂಲಕ, ಸುಳ್ಯ) –ವಿರುದ್ಧ–
ಶೇಖರ್ ವಿ. ಹರಿಕಾಂತ್ ಮತ್ತು ಮತ್ತೊಬ್ಬರು*

ದಂಡ ಪ್ರಕ್ರಿಯಾ ಸಂಹಿತೆಯ 378ರ (1) ಮತ್ತು (3)ನೇ ಪ್ರಕರಣದಡಿಯಲ್ಲಿನ ಕ್ರಿಮಿನಲ್ ಅಪೀಲು.

ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 201, 302 ಹಾಗೂ 317ನೇ ಪ್ರಕರಣಗಳು.

ಸೆಷನ್ಸ್ ಪ್ರಕರಣ ಸಂ.79/2011ರಲ್ಲಿ ದಕ್ಷಿಣ ಕನ್ನಡದ ಪುತ್ತೂರಿನಲ್ಲಿನ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರು/ತ್ವರಿತ ಗತಿಯ ನ್ಯಾಯಾಲಯವು ಹೊರಡಿಸಿದ 23.8.2011ರ ಖುಲಾಸೆ ತೀರ್ಪು ಹಾಗೂ ಆದೇಶದಲ್ಲಿನ ಅಪರಾಧಿಯ ಖುಲಾಸೆಯನ್ನು ಪ್ರಶ್ನಿಸಿ ಸರ್ಕಾರವು ಅಪೀಲನ್ನು ಸಲ್ಲಿಸಿದೆ.

ಪ್ರಶ್ನಿತ ತೀರ್ಪಿನ ಮೂಲಕ, ಅಧಿವಿಚಾರಣಾ ನ್ಯಾಯಾಲಯವು, ಭಾರತೀಯ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 302, 201ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಂದ ಆಪಾಧಿತನನ್ನು ಖುಲಾಸೆ ಮಾಡಿದೆ.

ಪ್ರಾಸಿಕ್ಯೂಷನ್ ವಾದವು ಸಂಕ್ಷಿಪ್ತವಾಗಿ ಈ ಮುಂದಿನಂತಿರುತ್ತದೆ. ಆಪಾದಿತ ಸಂಖ್ಯೆ 1 ಭಾರತೀಯ ಭೂ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾನೆ. ಆಪಾದಿತ ಸಂಖ್ಯೆ.2 ರೊಂದಿಗೆ ಇವನಿಗೆ ಪ್ರೀತಿಯುಂಟಾಗಿರುತ್ತದೆ. ಇಬ್ಬರೂ ಆರೋಪಿಗಳು ಒಂದೇ ಊರಿನವರಾಗಿರುತ್ತಾರೆ. ಆಪಾದಿತರ ಅನ್ಯೋನ್ಯತೆ ಹಾಗೂ ಪ್ರೀತಿಯ ಪರಿಣಾಮವಾಗಿ ಆಪಾದಿತ ಸಂಖ್ಯೆ.2 ಗರ್ಭಿಣಿಯಾಗಿರುತ್ತಾಳೆ; ಇಬ್ಬರು ಆಪಾದಿತರ

*ಕ್ರಿಮಿನಲ್ ಅಪೀಲು ಸಂಖ್ಯೆ: 29/2013, ದಿನಾಂಕ: 16ನೇ ಜೂನ್, 2016.

ತಂದೆ–ತಾಯಿಯರುಗಳು ಆಪಾದಿತರಿಬ್ಬರ ಮದುವೆಗೆ ಒಪ್ಪುವ ಸಾಧ್ಯತೆ ಇದ್ದಿರಲಿಲ್ಲ. ಆಪಾದಿತ ಸಂಖ್ಯೆ.2, ವೈರುದ್ಧದ ಪರಿಣಾಮಗಳಿಗೆ ಹೆದರಿ, ತನ್ನ ತಂದೆ–ತಾಯಿಯರಿಗೆ ತಾನು ಗರ್ಭಿಣಿಯಾಗಿರುವ ಬಗ್ಗೆ ತಿಳಿಸಿರುವುದಿಲ್ಲ. ಈ ವಿಷಯವನ್ನು ಆಪಾದಿತ ಸಂಖ್ಯೆ.1 ಇವನಿಗೆ ತಿಳಿಸಿರುತ್ತಾಳೆ. ಆಪಾದಿತ ಸಂಖ್ಯೆ.1ರ ಕೋರಿಕೆ ಮೇರೆಗೆ, ಆಪಾದಿತ ಸಂಖ್ಯೆ.2 ತನ್ನ ಊರಿನಿಂದ ಬೆಂಗಳೂರಿಗೆ ಬಂದಿರುತ್ತಾಳೆ. ಆಪಾದಿತರಿಬ್ಬರು ಒಂದು ಮನೆ ಬಾಡಿಗೆಗೆ ಪಡೆದು ಪತಿ–ಪತ್ನಿಯರ ಹಾಗೆ ಬಾಳಲು ಆರಂಭಿಸಿರುತ್ತಾರೆ; ಆ ತರುವಾಯ ವಿವಾಹವಾಗಲು ನಿರ್ಧರಿಸುತ್ತಾರೆ, ಇಬ್ಬರೂ ದೊಮ್ಮಲೂರಿನ ದೇವಾಲಯಕ್ಕೆ ತೆರಳಿ ವಿವಾಹ ಮಾಡಿಕೊಂಡಿರುತ್ತಾರೆ. ಅವರ ವಿವಾಹವನ್ನು ಬೆಂಗಳೂರಿನ ಇಂದಿರಾನಗರದ ಸಬ್–ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಾಯಿಸಿಕೊಂಡಿರುತ್ತಾರೆ. ಆ ತರುವಾಯ, ಆಪಾದಿತ ಸಂಖ್ಯೆ.2 ದಿನಾಂಕ: 6.3.2011 ರಂದು ಬೆಂಗಳೂರಿನ ಏರ್ ಫೋರ್ಸ್ ಕಮಾಂಡ್ ಆಸ್ಪತ್ರೆಯಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡಿರುತ್ತಾಳೆ. ಆದಾಗ್ಯೂ ಅಂಥ ವಿವಾಹದ ಸಂಗತಿಯನ್ನು ಇಬ್ಬರೂ ಆಪಾದಿತರ ತಂದೆ–ತಾಯಿಯರುಗಳಿಂದ ಹಾಗೂ ಗ್ರಾಮಸ್ಥರಿಂದ ಬಚ್ಚಿಟ್ಟಿರುತ್ತಾರೆ. ಆಪಾದಿತ ಸಂಖ್ಯೆ.2 ವಿವಾಹವಾಗದೆ ಗರ್ಭಿಣಿಯಾಗಿದ್ದಾಳೆ ಎಂಬುದನ್ನು ಗ್ರಾಮಸ್ಥರಿಗೆ ತಿಳಿದರೆ, ಅಪಾದಿತರನ್ನು ಗ್ರಾಮಸ್ಥರು ಗ್ರಾಮದ ಒಳಗೆ ಸೇರಿಸಿಕೊಳ್ಳುವುದಿಲ್ಲವೆಂದು ಹೆದರಿದ್ದು, ಮಗುವನ್ನು ಕೊಂದು, ನಂತರ ತಮ್ಮ ಸ್ವಗ್ರಾಮಕ್ಕೆ ತೆರಳಲು ನಿರ್ಧರಿಸಿರುತ್ತಾರೆ; ಅವರು ಮಗುವನ್ನು ಬಿಟ್ಟು ಬರಲು ಶ್ರೀ ಕುಕ್ಕೇ ಸುಬ್ರಮಣ್ಯವನ್ನು ಆಯ್ಕೆ ಮಾಡಿಕೊಂಡಿರುತ್ತಾರೆ; ಹಾಗಾಗಿ ಬಸ್ಸಿನಲ್ಲಿ 31.3.2011 ರಂದು ಕುಕ್ಕೆ ಸುಬ್ರಮಣ್ಯಕ್ಕೆ ತೆರಳಿರುತ್ತಾರೆ. ಆ ತರುವಾಯ ಬಸ್ಸು ನಿಲ್ದಾಣದಲ್ಲಿ ಇಳಿದು, ಆಟೋ ರಿಕ್ಷಾವನ್ನು ಬಾಡಿಗೆಗೆ ಪಡೆದುಕೊಂಡು, ಯಾತ್ರಿಕರು ಪವಿತ್ರ ಸ್ನಾನ ಮಾಡುವ ಕಡೆ ಕುಮಾರಧಾರ ನದಿಯಲ್ಲಿನ ಸ್ನಾನ ಘಟ್ಟಕ್ಕೆ ತೆರಳಿರುತ್ತಾರೆ. ಆಪಾದಿತ ಸಂಖ್ಯೆ.1 ನದಿಯ ದಡದ ನಿರ್ಜನ ಪ್ರದೇಶಕ್ಕೆ ಮಗುವನ್ನು ತೆಗೆದುಕೊಂಡು ತೆರಳಿ, ಮಗುವನ್ನು ಉಸಿರುಗಟ್ಟಿಸಿ ಕೊಲೆ ಮಾಡಿರುತ್ತಾನೆ. ತರುವಾಯ ಮರಳಿನಲ್ಲಿ ಮಗುವನ್ನು ಹೂಳಿರುತ್ತಾನೆ. ನಂತರ ಆಪಾದಿತ ಸಂಖ್ಯೆ.2 ಕುಳಿತಿದ್ದ ಸ್ಥಳಕ್ಕೆ ಬಂದು, ಆಕೆಗೂ ವಿಷಯ ತಿಳಿಸಿ, ಅವರು ಬಸ್ಸನ್ನು ಹತ್ತಲು ಬಸ್ ನಿಲ್ದಾಣಕ್ಕೆ ಬರುತ್ತಾರೆ. ಹೆಚ್ಚಿನ ಸಂಖ್ಯೆಯ ಆಟೋ ಚಾಲಕರು ಹಾಗು ಸಾರ್ವಜನಿಕರು ಸ್ನಾನ ಘಟ್ಟಕ್ಕೆ ತೆರಳುವಾಗ ಆಪಾದಿತರ ಕೈಯಲ್ಲಿ ಮಗುವಿದ್ದದ್ದು ಹಾಗೂ ಅಲ್ಲಿಂದ ಹಿಂದಿರುಗುವಾಗ ಬರಿಗೈಯಲ್ಲಿರುವುದನ್ನು ಕಂಡಿದ್ದರು. ಆ ಕುರಿತು ಅವರುಗಳನ್ನು ಪ್ರಶ್ನಿಸಿದಾಗ, ಆಪಾದಿತರು ನೀಡಿದ ಉತ್ತರದಿಂದ ತೃಪ್ತರಾಗದ ಅವರುಗಳು ಸುಬ್ರಮಣ್ಯ ಪೋಲೀಸ್ ಠಾಣೆಗೆ ಅವರುಗಳನ್ನು ಕರೆದೊಯ್ದಿದ್ದಾರೆ. ಅಲ್ಲಿ ಆಪಾದಿತರು ತಮ್ಮ ಗುರುತನ್ನು

ಬಹಿರಂಗಪಡಿಸಿ, ತಮ್ಮ ವಿವಾಹ ಪ್ರಮಾಣ ಪತ್ರವನ್ನು ತೋರಿಸಿರುತ್ತಾರೆ. ಆಪಾದಿತರ ಹೇಳಿಕೆಯನ್ನು ದಾಖಲಿಸಿಕೊಂಡ ತರುವಾಯ ಪೋಲೀಸರು ಆಪಾದಿತರನ್ನು ಅಷ್ಟರಮಟ್ಟಿಗೆ ಅನುಮಾನಿಸದೆ ಕುಕ್ಕೆ ಸುಬ್ರಮಣ್ಯದಿಂದ ಹೊರಡಲು ಅವಕಾಶ ಕಲ್ಪಿಸಿರುತ್ತಾರೆ.

ನಮ್ಮ ಪರಿಗಣಿತ ಅಭಿಪ್ರಾಯದಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ಹೇಳಿಕೆಯನ್ನು ದಾಖಲಿಸುವ ಹಂತದಲ್ಲಿ ಆಪಾದಿತರು ಈ ನ್ಯಾಯಾಲಯದ ಮುಂದೆ ಸಲ್ಲಿಸಿರುವ ಲಿಖಿತ ಹೇಳಿಕೆಯು ಪ್ರಾಸಿಕ್ಯೂಷನ್ ವಾದವನ್ನು ಬೆಂಬಲಿಸುತ್ತದೆ ಹಾಗೂ ಎಲ್ಲಾ ವಸ್ತುನಿಷ್ಠ ಆಯಾಮಗಳಲ್ಲಿಯೂ ಈ ವಾದವನ್ನು ಸಮರ್ಥಿಸುತ್ತದೆ.

ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ದಾಖಲಿಸಿದ ಆಪಾದಿತರ ಸಂ.1ರ ಹೇಳಿಕೆಯನ್ನು ಪ್ರತಿವಾದ ಸಲ್ಲಿಸುವ ವಕೀಲರ ವಾದದಂತೆ ಮಾತ್ರ ರೂಪಿಸಲಾಗಿದೆಯೆಂಬ ವಾಸ್ತವಾಂಶದ ಬಗ್ಗೆ ನೀವು ಪ್ರಜ್ಞಾ ಪೂರ್ವಕವಾಗಿದ್ದೇವೆ. ಆದಾಗ್ಯೂ, ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ಆಪಾದಿತರು ಪ್ರತಿವಾದದಲ್ಲಿ ಸಲ್ಲಿಸಿದಂಥ ಹೇಳಿಕೆಯನ್ನು ಪ್ರಾಸಿಕ್ಯೂಷನ್ ಸಲ್ಲಿಸಿದ ಸಾಕ್ಷ್ಯವನ್ನು ನಂಬಲು ಸಹಾಯಕವಾಗುವಂತೆ ಪರಿಗಣಿಸಬೇಕಾಗುತ್ತದೆ. ಆದರೆ ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿನ ಅಂಥ ಹೇಳಿಕೆಯ ಭಾಗವನ್ನು ಮಾತ್ರ ಆತನ ಅಪರಾಧ ನಿರ್ಣಯದ ಏಕ ಮಾತ್ರ ಆಧಾರವಾಗಿ ರೂಪಿಸಲಾಗುವುದಿಲ್ಲ. ಈ ವಿಷಯ ಕುರಿತಾದ ಕಾನೂನು, ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿನ ಆಪಾದಿತರ ಹೇಳಿಕೆಯನ್ನು ಸಂಪೂರ್ಣವಾಗಿಯಾಗಲೀ ಅಥವಾ ಭಾಗಶ:ವಾಗಿಯಾಗಲೀ ನಂಬಬಹುದೆಂಬ ಅಭಿಪ್ರಾಯದೊಂದಿಗೆ ಬಹುತೇಕ ಇತ್ಯರ್ಥಗೊಂಡಿರುತ್ತದೆ. (1969 ಎಐಆರ್ 422 ರಲ್ಲಿ ವರದಿಯಾದ *ನಿಶಿ ಕಾಂತ್ ಝಾ –ವಿರುದ್ಧ– ಬಿಹಾರ ಸರ್ಕಾರ ಹಾಗೂ ಎಐಆರ್ 2002 ಎಸ್‌ಸಿ 3582*ರಲ್ಲಿ ವರದಿಯಾದ *ಮೋಹನ್ ಸಿಂಗ್ –ವಿರುದ್ಧ– ಪ್ರೇಮ್ ಸಿಂಗ್ ಹಾಗೂ ಮತ್ತೊಬ್ಬರು* ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ನಿರಪರಾಧಿಯೆಂದು ನಿರ್ಣಯಿಸುವ ಅಂಶವು ಪ್ರಾಸಿಕ್ಯೂಷನ್ ನೀಡಿದ ಸಾಕ್ಷ್ಯದ ಆಧಾರದ ಮೇಲೆ ಸುಳ್ಳೆಂದು ಕಂಡು ಬಂದಲ್ಲಿ, ಆಪಾದಿತರ ಹೇಳಿಕೆಯ ಆರೋಪ ಸಾಬೀತು ಪಡಿಸುವ ಅಂಶವನ್ನು ಅವಲಂಬಿಸುವ ಸಾಧ್ಯತೆ ಇರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.

62

ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ಆತನು ಹೇಳಿಕೆ ನೀಡುವ ಸಮಯದಲ್ಲಿ ತಪ್ಪು ಮಾಹಿತಿ ನೀಡಿದಲ್ಲಿ ನ್ಯಾಯಾಲಯವು ಆತನ ವಿರುದ್ಧ ಪ್ರತಿಕೂಲ ಊಹೆಯನ್ನು ಮಾಡಬಹುದಾಗಿರುತ್ತದೆಂಬುದು ಇತ್ಯರ್ಥಗೊಂಡ ಕಾನೂನಾಗಿರುತ್ತದೆ. ಆದಾಗ್ಯೂ, ಪ್ರಸ್ತುತ ಪ್ರಕರಣದಲ್ಲಿ, ಆಪಾದಿತನು ಸರಿಯಿಲ್ಲದ ಹಾಗೂ ಸುಳ್ಳು ಮಾಹಿತಿ ನೀಡದಿರುವುದು ಕಂಡು ಬಂದಿದ್ದು, ವಿವರಣೆಯು ನ್ಯಾಯಯುತವು, ನಂಬಲರ್ಹವೆಂದು ಕಂಡು ಬಂದಿರುವುದರಿಂದ ಒಪ್ಪಿಕೊಳ್ಳಬಹುದಾಗಿರುತ್ತದೆ. ಆಪಾದಿತನ ಹೇಳಿಕೆಯು ಪ್ರಾಸಿಕ್ಯೂಷನ್‌ನ ವಾದವನ್ನು ಸಂಪೂರ್ಣವಾಗಿ ಬೆಂಬಲಿಸುವುದರಿಂದ ಹಾಗೂ ಸಮರ್ಥಿಸುವುದರಿಂದ ಮಾತ್ರದಿಂದಲೇ ಇದು, ಆಪಾದಿತರ ಅಪರಾಧ ನಿರ್ಣಯಕ್ಕೆ ಸಂಬಂಧಿಸಿದ ಏಕ ಮಾತ್ರ ಆಧಾರವಾಗಿರುವುದಿಲ್ಲ. ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿನ ಆಪಾದಿತರ ಹೇಳಿಕೆಯನ್ನು ಪ್ರಾಸಿಕ್ಯೂಷನ್ ವಾದದ ನಿಜಾಂಶವನ್ನು ತಿಳಿಸಲು ಅಥವಾ ಅನ್ಯಥಾ ಪರಿಗಣನೆಗೆ ತೆಗೆದುಕೊಳ್ಳಬಹುದಾಗಿರುತ್ತದೆ. ಅಂಥ ಹೇಳಿಕೆಯನ್ನು ಪ್ರಮಾಣ ಮಾಡಿಸಿದ ತರುವಾಯ ದಾಖಲಿಸದಿರುವುದರಿಂದ ಹಾಗು ಆಪಾದಿತರನ್ನು ಪಾಟೀ ಸವಾಲು ಮಾಡದಿರುವುದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ಹಾಗೆ ದಾಖಲಿಸಿದ ಈತನ ಹೇಳಿಕೆಯನ್ನು ಸಾಕ್ಷ್ಯ ಅಧಿನಿಯಮ, 1872ರ 3ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗಿನ ಸಾಕ್ಷ್ಯದಂತೆ ಪರಿಗಣಿಸಬೇಕಾಗಿರುವುದಿಲ್ಲ. ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ಆಪಾದಿತರ ಹೇಳಿಕೆಯನ್ನು ಸಾಕ್ಷ್ಯ ಅಧಿನಿಯಮ, 1872ರ 3ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸಾಕ್ಷ್ಯವೆಂದು ಪರಿಗಣಿಸದಿದ್ದಾಗ್ಯೂ, ಪ್ರಾಸಿಕ್ಯೂಷನ್ ವಾದದ ನಿಜಾಂಶವನ್ನು ತಿಳಿಸಲು ಅಥವಾ ಅನ್ಯಥಾ ಪರಿಗಣನೆಗೆ ತೆಗೆದುಕೊಳ್ಳಬಹುದಾಗಿರುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ದಾಖಲಿಸಿಕೊಂಡ ಆಪಾದಿತರ ಹೇಳಿಕೆಯು ಪ್ರಾಸಿಕ್ಯೂಷನ್‌ನ ವಾದವನ್ನು ಬೆಂಬಲಿಸಿದಲ್ಲಿ, ಇದು ಖಂಡಿತವಾಗಿ, ತನಿಖೆ ಮಾಡಲು, ನಿರ್ದಿಷ್ಟವಾಗಿ, ಪ್ರಾಸಿಕ್ಯೂಷನ್ ಘಟನೆಗಳ ಸರಣಿಯನ್ನು ಸುಸ್ಥಾಪಿಸಲು ಸಮರ್ಥವಾಗದಿದ್ದಾಗ, ನ್ಯಾಯಾಲಯಕ್ಕೆ ಸೂಕ್ತ ಪರಿಗಣನೆಯಾಗಬಹುದಾಗಿರುತ್ತದೆ. ಪ್ರಾಸಿಕ್ಯೂಷನ್ ಉದಾಹರಿಸಿದ ಸಂದರ್ಭಗಳು ಯುಕ್ತ ಸಂದೇಹವನ್ನು ಮೀರಿ ರುಜುವಾತಾಗಿವೆಯೆಂದು ಹಾಗೂ ತತ್ಪರಿಣಾಮವಾಗಿ ಸಂದರ್ಭಗಳ ಸರಣಿಯು ಪೂರ್ಣಗೊಳ್ಳುವುದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ಆಪಾದಿತರ ಹೇಳಿಕೆಯು ಪರಿಗಣಿಸಲು ಈ ನ್ಯಾಯಾಲಯಕ್ಕೆ ಸಂಬಂಧಿಸಿದ ಹೆಚ್ಚುವರಿ ಹಾಗೂ ಸೂಕ್ತ ಪರಿಗಣನೆಯಾಗಿರುತ್ತದೆ.

ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು, ನಾವು ಪ್ರಾಸಿಕ್ಯೂಷನ್ ಯುಕ್ತ ಸಂದೇಹವನ್ನು ಮೀರಿ ತನ್ನ ವಾದವನ್ನು ರುಜುವಾತುಪಡಿಸಿದೆಯೆಂದು ಅಭಿಪ್ರಾಯಪಟ್ಟಿರುತ್ತೇವೆ; ಅದೂ ಅಲ್ಲದೆ ಯುಕ್ತ ಸಂದೇಹವನ್ನು ಮೀರಿ ಪ್ರಾಸಿಕ್ಯೂಷನ್ ರುಜುವಾತು ಪಡಿಸಿದ ಎಲ್ಲಾ ಸಂದರ್ಭಗಳು, ಆಪಾದಿತರು ಕಾನೂನಿನ ಕುಣಿಕೆಯಿಂದ ಯಾವುದೇ ರೀತಿ ತಪ್ಪಿಸಿಕೊಳ್ಳದಂಥ ಸಂದರ್ಭಗಳ ಸಂಪೂರ್ಣ ಸರಣಿಯನ್ನು ರೂಪಿಸಿವೆ. ಅದೂ ಅಲ್ಲದೆ, ಪ್ರಾಸಿಕ್ಯೂಷನ್ ವಾದವು, ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ದಾಖಲಾದ ಆಪಾದಿತ ಸಂ.1ರ ಹೇಳಿಕೆಯಿಂದ ಬೆಂಬಲಿತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ನಾವು, ಆಪಾದಿತರು ಕನಿಷ್ಟ ಭಾರತ ದಂಡ ಸಂಹಿತೆಯ 317ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿದ್ದಾರೆಂಬ ತೀರ್ಮಾನಕ್ಕೆ ಬಂದಿರುತ್ತೇವೆ.

ಪ್ರಕರಣದ ಮೇಲೆ ಹೇಳಿದ ರುಜುವಾತಿನ ವಾಸ್ತವಾಂಶಗಳು ಹಾಗು ಸಂದರ್ಭಗಳ ಹಿನ್ನೆಲೆಯಲ್ಲಿ, ಅಧಿವಿಚಾರಣಾ ನ್ಯಾಯಾಲಯವು, ಆಪಾದಿತರನ್ನು ಖುಲಾಸೆ ಮಾಡಿರುವುದು ಸಮರ್ಥನೀಯವಾಗಿರುವುದಿಲ್ಲ. ಆದಾಗ್ಯೂ, ಆಪಾದಿತರು ಬಹುಶಃ ಮಗುವನ್ನು ಕೊಲೆ ಮಾಡುವ ಉದ್ದೇಶವನ್ನು ಹೊಂದಿರಲಿಲ್ಲವೆಂಬುದು ನಮಗೆ ಕಂಡು ಬಂದಿರುತ್ತದೆ. ಅವರು ಮಕ್ಕಳಿಲ್ಲದ ಯಾರಾದರು ದಂಪತಿಗಳು ಆ ಮಗುವನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಿ, ಸಾಕಿಕೊಳ್ಳುತ್ತಾರೆಂಬ ದೃಷ್ಟಿಯಿಂದ ಮಗುವನ್ನು ತೊರೆದು ಬಂದಿರುತ್ತಾರಾದರೂ, ಇದು ಭಾರತ ದಂಡ ಸಂಹಿತೆಯ 302ನೇ ಪ್ರಕರಣದಡಿಯಲ್ಲಿನ ಅಪರಾಧಕ್ಕೆ ಸಂಬಂಧಿಸಿದಂತೆ ಅಪರಾಧ ನಿರ್ಣೀತರಾಗಿರುತ್ತಾರೆ. ಅದರೊಂದಿಗೆ, ಅಂಥ ತೊರೆಯುವಿಕೆಯಿಂದಾಗಿ ಮಗುವು ಮರಣವನ್ನು ಅಪ್ಪಬಹುದೆಂಬ ಪ್ರಜ್ಞೆಯನ್ನು ಅವರು ಹೊಂದಿದ್ದರೆಂಬಷ್ಟರ ಮಟ್ಟಿಗೆ ಭಾರತ ದಂಡ ಸಂಹಿತೆಯ 304ರ ಭಾಗ 2 ಹಾಗೂ 317 ಪ್ರಕರಣಗಳಡಿಯಲ್ಲಿ ಅಪರಾಧ ನಿರ್ಣೀತರಾಗಿರತಕ್ಕವರಾಗಿರುತ್ತಾರೆ.

ಸೆಷನ್ಸ್ ಪ್ರಕರಣ ಸಂ.79/2011ರಲ್ಲಿ 23.8.2011ರಂದು ಹೊರಡಿಸಿರುವ ಖುಲಾಸೆ ತೀರ್ಪು ಹಾಗೂ ಆದೇಶವನ್ನು ಈ ಮೂಲಕ ರದ್ದುಪಡಿಸಿರುತ್ತೇವೆ. ಆಪಾದಿತ ಸಂ.1 ಹಾಗೂ ಆಪಾದಿತ ಸಂ.2 ಇಬ್ಬರೂ ಆಪಾದಿತರು ಭಾರತ ದಂಡ ಸಂಹಿತೆಯ 34ನೇ

ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧಕ್ಕೆ ಸಂಬಂಧಿಸಿದ ಅಪರಾಧಗಳಿಗೆ ನಿರ್ಣೀತರಾಗಿರುತ್ತಾರೆ. ಅವರುಗಳಿಗೆ ಅವರ ಅಪರಾಧಗಳಿಗೆ ಸಂಬಂಧಿಸಿದಂತೆ, ಪ್ರತ್ಯೇಕವಾಗಿ 7 ವರ್ಷಗಳ ಅವಧಿಯ ಕಾರಾವಾಸ ಶಿಕ್ಷೆ ಹಾಗು ತಲಾ 1,00,000/– ರೂಪಾಯಿಗಳ ದಂಡವನ್ನು ಸಂದಾಯ ಮಾಡುವ ಶಿಕ್ಷೆಯನ್ನು ವಿಧಿಸಲಾಗಿರುತ್ತದೆ. ದಂಡದ ಸಂದಾಯಕ್ಕೆ ತಪ್ಪಿದಲ್ಲಿ, ಆಪಾದಿತರಿಬ್ಬರೂ ಮತ್ತೆ ಮೂರು ವರ್ಷಗಳ ಕಾರಾವಾಸ ಶಿಕ್ಷೆಗೆ ಗುರಿಯಾಗತಕ್ಕದ್ದಾಗಿರುತ್ತದೆ. ಎರಡೂ ಅಪರಾಧಗಳ ಸಂಬಂಧದಲ್ಲಿನ ಕಾರಾವಾಸ ಶಿಕ್ಷೆಯನ್ನು ಒಟ್ಟಾಗಿಯೇ ವಿಧಿಸತಕ್ಕದ್ದಾಗಿರುತ್ತದೆ. ಆಪಾದಿತರು (ಪ್ರತ್ಯರ್ಜಿದಾರರು) ಈಗಾಗಲೇ ಅನುಭವಿಸಿರುವ ಕಾರಾವಾಸ ಶಿಕ್ಷೆಯ ಅವಧಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ 428ನೇ ಪ್ರಕರಣದ ಮೇರೆಗೆ ಕಳೆಯತಕ್ಕದ್ದು.

ತದನುಸಾರವಾಗಿ ಅಪೀಲನ್ನು ಅಂಗೀಕರಿಸಲಾಗಿದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು***      ***ಪ್ಯಾರಾಗಳಲ್ಲಿ***

*1. 1969 ಎಐಆರ್ 422*
*ನಿಶಿ ಕಾಂತ್ ಝು –ವಿರುದ್ಧ–*
*ಬಿಹಾರ ಸರ್ಕಾರ* — *(ಉಲ್ಲೇ) 17*

*2. ಎಐಆರ್ 2002 ಎಸ್‌ಸಿ 3582*
*ಮೋಹನ್ ಸಿಂಗ್ –ವಿರುದ್ಧ–*
*ಪ್ರೇಮ್ ಸಿಂಗ್ ಮತ್ತು ಮತ್ತೊಬ್ಬರು* — *(ಉಲ್ಲೇ) 17*

ಅರ್ಜಿದಾರರ ಪರ: ಶ್ರೀ ಎಸ್. ರಾಚಯ್ಯ , ಹೆಚ್‌ಸಿಜಿಪಿ;
ಪ್ರತ್ಯರ್ಜಿದಾರರ ಪರ: ಶ್ರೀಮತಿ ಅರ್ಚನಾ ಮೂರ್ತಿ, ವಕೀಲರ ಪರವಾಗಿ
ಶ್ರೀ ತಿಪ್ಪೆಸ್ವಾಮಿ, ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ಮೋಹನ್ ಎಂ. ಶಾಂತನಗೌಡರ್:**

ಸೆಷನ್ಸ್ ಪ್ರಕರಣ ಸಂ.79/2011ರಲ್ಲಿ ದಕ್ಷಿಣ ಕನ್ನಡದ ಪುತ್ತೂರಿನಲ್ಲಿನ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರು/ತ್ವರಿತ ಗತಿಯ ನ್ಯಾಯಾಲಯವು ಹೊರಡಿಸಿದ 23.8.2011ರ ಖುಲಾಸೆ ತೀರ್ಪು ಹಾಗೂ ಆದೇಶದಲ್ಲಿನ ಅಪರಾಧಿಯ ಖುಲಾಸೆಯನ್ನು ಪ್ರಶ್ನಿಸಿ ಸರ್ಕಾರವು ಈ ಅಪೀಲನ್ನು ಸಲ್ಲಿಸಿದೆ.

2. ಪ್ರಶ್ನಿತ ತೀರ್ಪಿನ ಮೂಲಕ, ಅಧಿವಿಚಾರಣಾ ನ್ಯಾಯಾಲಯವು, ಭಾರತೀಯ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 302, 201ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಂದ ಆಪಾದಿತನನ್ನು ಖುಲಾಸೆ ಮಾಡಿದೆ.

3. ಪ್ರಾಸಿಕ್ಯೂಷನ್ ವಾದವು ಸಂಕ್ಷಿಪ್ತವಾಗಿ ಈ ಮುಂದಿನಂತಿರುತ್ತದೆ. ಆಪಾದಿತ ಸಂಖ್ಯೆ 1 ಭಾರತೀಯ ಭೂ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾನೆ. ಆಪಾದಿತ ಸಂಖ್ಯೆ.2 ರೊಂದಿಗೆ ಇವನಿಗೆ ಪ್ರೀತಿಯುಂಟಾಗಿರುತ್ತದೆ. ಇಬ್ಬರೂ ಆರೋಪಿಗಳು ಒಂದೇ ಊರಿನವರಾಗಿರುತ್ತಾರೆ. ಆಪಾದಿತರ ಅನ್ಯೋನ್ಯತೆ ಹಾಗೂ ಪ್ರೀತಿಯ ಪರಿಣಾಮವಾಗಿ ಆಪಾದಿತ ಸಂಖ್ಯೆ.2 ಗರ್ಭಿಣಿಯಾಗಿರುತ್ತಾಳೆ; ಇಬ್ಬರು ಆಪಾದಿತರ ತಂದೆ–ತಾಯಿಯರುಗಳು ಆಪಾದಿತರಿಬ್ಬರ ಮದುವೆಗೆ ಒಪ್ಪುವ ಸಾಧ್ಯತೆ ಇದ್ದಿರಲಿಲ್ಲ. ಆಪಾದಿತ ಸಂಖ್ಯೆ.2, ವೈರುದ್ಧದ ಪರಿಣಾಮಗಳಿಗೆ ಹೆದರಿ, ತನ್ನ ತಂದೆ–ತಾಯಿಯರಿಗೆ ತಾನು ಗರ್ಭಿಣಿಯಾಗಿರುವ ಬಗ್ಗೆ ತಿಳಿಸಿರುವುದಿಲ್ಲ. ಈ ವಿಷಯವನ್ನು ಆಪಾದಿತ ಸಂಖ್ಯೆ.1 ಇವನಿಗೆ ತಿಳಿಸಿರುತ್ತಾಳೆ. ಆಪಾದಿತ ಸಂಖ್ಯೆ.1ರ ಕೋರಿಕೆ ಮೇರೆಗೆ, ಆಪಾದಿತ ಸಂಖ್ಯೆ.2 ತನ್ನ ಊರಿನಿಂದ ಬೆಂಗಳೂರಿಗೆ ಬಂದಿರುತ್ತಾಳೆ. ಆಪಾದಿತರಿಬ್ಬರು ಒಂದು ಮನೆ ಬಾಡಿಗೆಗೆ ಪಡೆದು ಪತಿ–ಪತ್ನಿಯರ ಹಾಗೆ ಬಾಳಲು ಆರಂಭಿಸಿರುತ್ತಾರೆ; ಆ ತರುವಾಯ ವಿವಾಹವಾಗಲು

ನಿರ್ಧರಿಸುತ್ತಾರೆ, ಇಬ್ಬರೂ ದೊಮ್ಮಲೂರಿನ ದೇವಾಲಯಕ್ಕೆ ತೆರಳಿ ವಿವಾಹ ಮಾಡಿಕೊಂಡಿರುತ್ತಾರೆ. ಅವರ ವಿವಾಹವನ್ನು ಬೆಂಗಳೂರಿನ ಇಂದಿರಾನಗರದ ಸಬ್–ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಾಯಿಸಿಕೊಂಡಿರುತ್ತಾರೆ. ಆ ತರುವಾಯ, ಆಪಾದಿತ ಸಂಖ್ಯೆ.2 ದಿನಾಂಕ 6.3.2011 ರಂದು ಬೆಂಗಳೂರಿನ ಏರ್ ಪೋರ್ಸ್ ಕಮಾಂಡ್ ಆಸ್ಪತ್ರೆಯಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡಿರುತ್ತಾಳೆ. ಆದಾಗ್ಯೂ ಅಂಥ ವಿವಾಹದ ಸಂಗತಿಯನ್ನು ಇಬ್ಬರೂ ಆಪಾದಿತರ ತಂದೆ–ತಾಯಿಯರುಗಳಿಂದ ಹಾಗೂ ಗ್ರಾಮಸ್ಥರಿಂದ ಬಚ್ಚಿಟ್ಟಿರುತ್ತಾರೆ. ಆಪಾದಿತ ಸಂಖ್ಯೆ.2 ವಿವಾಹವಾಗದೆ ಗರ್ಭಿಣಿಯಾಗಿದ್ದಾಳೆ ಎಂಬುದು ಗ್ರಾಮಸ್ಥರಿಗೆ ತಿಳಿದರೆ, ಅಪಾದಿತರನ್ನು ಗ್ರಾಮಸ್ಥರು ಗ್ರಾಮದ ಒಳಗೆ ಸೇರಿಸಿಕೊಳ್ಳುವುದಿಲ್ಲವೆಂದು ಹೆದರಿದ್ದು, ಮಗುವನ್ನು ಕೊಂದು, ನಂತರ ತಮ್ಮ ಸ್ವಗ್ರಾಮಕ್ಕೆ ತೆರಳಲು ನಿರ್ಧರಿಸಿರುತ್ತಾರೆ; ಅವರು ಮಗುವನ್ನು ಬಿಟ್ಟು ಬರಲು ಶ್ರೀ ಕುಕ್ಕೇ ಸುಬ್ರಮಣ್ಯವನ್ನು ಆಯ್ಕೆ ಮಾಡಿಕೊಂಡಿರುತ್ತಾರೆ; ಹಾಗಾಗಿ ಬಸ್ಸಿನಲ್ಲಿ 31.3.2011 ರಂದು ಕುಕ್ಕೆ ಸುಬ್ರಮಣ್ಯಕ್ಕೆ ತೆರಳಿರುತ್ತಾರೆ. ಆ ತರುವಾಯ ಬಸ್ ನಿಲ್ದಾಣದಲ್ಲಿ ಇಳಿದು, ಆಟೋ ರಿಕ್ಷಾವನ್ನು ಬಾಡಿಗೆಗೆ ಪಡೆದುಕೊಂಡು, ಯಾತ್ರಿಕರು ಪವಿತ್ರ ಸ್ನಾನ ಮಾಡುವ ಕಡೆ ಕುಮಾರಧಾರ ನದಿಯಲ್ಲಿನ ಸ್ನಾನ ಘಟ್ಟಕ್ಕೆ ತೆರಳಿರುತ್ತಾರೆ. ಆಪಾದಿತ ಸಂಖ್ಯೆ.1 ನದಿಯ ದಡದ ನಿರ್ಜನ ಪ್ರದೇಶಕ್ಕೆ ಮಗುವನ್ನು ತೆಗೆದುಕೊಂಡು ತೆರಳಿ, ಮಗುವನ್ನು ಉಸಿರುಗಟ್ಟಿಸಿ ಕೊಲೆ ಮಾಡಿರುತ್ತಾನೆ. ತರುವಾಯ ಮರಳಿನಲ್ಲಿ ಮಗುವನ್ನು ಹೂಳಿರುತ್ತಾನೆ. ನಂತರ ಆಪಾದಿತ ಸಂಖ್ಯೆ.2 ಕುಳಿತಿದ್ದ ಸ್ಥಳಕ್ಕೆ ಬಂದು, ಆಕೆಗೂ ವಿಷಯ ತಿಳಿಸಿ, ಅವರು ಬಸ್ಸನ್ನು ಹತ್ತಲು ಬಸ್ ನಿಲ್ದಾಣಕ್ಕೆ ಬರುತ್ತಾರೆ. ಹೆಚ್ಚಿನ ಸಂಖ್ಯೆಯ ಆಟೋ ಚಾಲಕರು ಹಾಗೂ ಸಾರ್ವಜನಿಕರು ಸ್ನಾನ ಘಟ್ಟಕ್ಕೆ ತೆರಳುವಾಗ ಆಪಾದಿತರ ಕೈಯಲ್ಲಿ ಮಗುವಿದ್ದದ್ದು ಹಾಗೂ ಅಲ್ಲಿಂದ ಹಿಂದಿರುಗುವಾಗ ಬರಿಗೈಯಲ್ಲಿರುವುದನ್ನು ಕಂಡಿದ್ದರು. ಆ ಕುರಿತು ಅವರುಗಳನ್ನು ಪ್ರಶ್ನಿಸಿದಾಗ, ಆಪಾದಿತರು ನೀಡಿದ ಉತ್ತರದಿಂದ ತೃಪ್ತರಾಗದ ಅವರುಗಳು ಸುಬ್ರಮಣ್ಯ ಪೊಲೀಸ್ ಠಾಣೆಗೆ ಅವರುಗಳನ್ನು ಕರೆದೊಯ್ದಿದ್ದಾರೆ. ಅಲ್ಲಿ ಆಪಾದಿತರು ತಮ್ಮ ಗುರುತನ್ನು ಬಹಿರಂಗಪಡಿಸಿ, ತಮ್ಮ ವಿವಾಹ ಪ್ರಮಾಣ ಪತ್ರವನ್ನು ತೋರಿಸಿರುತ್ತಾರೆ. ಆಪಾದಿತರ ಹೇಳಿಕೆಯನ್ನು ದಾಖಲಿಸಿಕೊಂಡ ತರುವಾಯ ಪೊಲೀಸರು ಆಪಾದಿತರನ್ನು

ಅಷ್ಟರಮಟ್ಟಿಗೆ ಅನುಮಾನಿಸದೆ ಕುಕ್ಕೆ ಸುಬ್ರಮಣ್ಯದಿಂದ ಹೊರಡಲು ಅವಕಾಶ ಕಲ್ಪಿಸಿರುತ್ತಾರೆ.

4. ದಿನಾಂಕ 4.4.2011 ರಂದು ಅಂದರೆ ಘಟನೆ ನಡೆದ ನಾಲ್ಕು ದಿನಗಳ ತರುವಾಯ ಶ್ರೀ ಕುಕ್ಕೆ ಸುಬ್ರಮಣ್ಯದ ಅಶ್ಲೇಷಾ ಪೆಟ್ರೋಲ್ ಪಂಪ್‌ನ ಬಳಿ ಮನೆಯನ್ನು ಹೊಂದಿರುವಂಥ ಪ್ರಾ.ಸಾ.1, ತನ್ನ ಕಾಂಪೌಂಡ್ ಒಳಗಡೆ ಬೀದಿ ನಾಯಿಯೊಂದು ಮೃತ ಶರೀರವನ್ನು / ಮೃತದೇಹವನ್ನು ಎತ್ತಿಕೊಂಡು ಬಂದದ್ದನ್ನು ನೋಡಿ, ಆಕೆ ನಾಯಿಯನ್ನು ಅಟ್ಟುತ್ತಾಳೆ. ಆಗ ನಾಯಿ ಕಾಂಪೌಂಡಿನ ಒಳಗೆ ಆ ಮೃತ ಶರೀರವನ್ನು ಬಿಟ್ಟು ಹೋಗಿಬಿಡುತ್ತದೆ. ಹೆಣ್ಣು ಮಗುವಿನ ಮೃತದೇಹವನ್ನು ಬೀದಿ ನಾಯಿ ಎಳೆದಾಡುತ್ತಾ ತಂದಿದ್ದನ್ನು ನೋಡಿದ ತರುವಾಯ ಪ್ರಾ.ಸಾ.1 ತನ್ನ ಬಾಡಿಗೆದಾರನು ಹಾಗೂ ಅರಣ್ಯಾಧಿಕಾರಿಯಾಗಿರುವಂಥ ಶ್ರೀಯುತ ಮಹಾಬಲ – ಪ್ರಾ.ಸಾ.13 ಇವರಿಗೆ ಕರೆದು ತಿಳಿಸಿರುತ್ತಾರೆ. ಪ್ರಾ.ಸಾ.13 ಪೊಲೀಸರಿಗೆ ಮೇಲೆ ಹೇಳಿದ ವಾಸ್ತವಾಂಶವನ್ನು ತಿಳಿಸಿರುತ್ತಾರೆ. ಪ್ರಾ.ಸಾ.13–ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಸ್ಥಳಕ್ಕೆ ಭೇಟಿ ನೀಡಿ, ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿರುತ್ತಾರೆ. ಪ್ರಾ.ಸಾ.1 ಸುಬ್ರಮಣ್ಯ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ.17/2011ರಲ್ಲಿ ನೋಂದಾಯಿಸಲಾದಂಥ ನಿಶಾನೆ ಪಿ.1ರ ಮೇರೆಗೆ ದೂರನ್ನು ದಾಖಲಿಸಿರುತ್ತಾಳೆ. ಪ್ರಾ.ಸಾ.20 ಹಾಗೂ 21 ಇನ್ಸ್‌ಪೆಕ್ಟರ್ ರವರುಗಳಾಗಿರುತ್ತಾರೆ; ಅವರು ತನಿಖೆಯನ್ನು ನಡೆಸುತ್ತಿರುತ್ತಾರೆ ಹಾಗೂ ಕೊನೆಯದಾಗಿ, ಅಂತಿಮ ತನಿಖಾ ವರದಿಯನ್ನು ಪ್ರಾ.ಸಾ.21 ರಿಂದ ದಾಖಲಿಸಲಾಗಿರುತ್ತದೆ.

5. ಇದರ ವಾದವನ್ನು ರುಜುವಾತು ಮಾಡುವ ದೃಷ್ಟಿಯಿಂದ, ಪ್ರಾಸಿಕ್ಯೂಷನ್ ಎಲ್ಲಾ 22 ಸಾಕ್ಷ್ಯಗಳನ್ನು ತನಿಖೆ ಮಾಡಿ, 37 ನಿಶಾನೆಗಳನ್ನು ಹಾಗೂ 2 ಮುದ್ದೇ ಮಾಲುಗಳನ್ನು ಗುರುತು ಮಾಡಲಾಗಿರುತ್ತದೆ. ಪ್ರತಿವಾದಿ ವಕೀಲರು ಯಾವುದೇ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ. ಮೇಲೆ ಹೇಳಿದಂತೆ, ಅಧಿವಿಚಾರಣಾ ನ್ಯಾಯಾಲಯವು, ದಾಖಲೆಯ ಮೌಲ್ಯಮಾಪನ ಮಾಡಿದ ಮೇಲೆ, ಭಾರತ ದಂಡ ಸಂಹಿತೆಯ 302ನೇ ಪ್ರಕರಣದಡಿಯಲ್ಲಿ ಅಪರಾಧಕ್ಕೆ ಸಂಬಂಧಿಸಿದಂತೆ ತನ್ನ

ವಾದವನ್ನು ರುಜುವಾತುಪಡಿಸಿರುವುದಿಲ್ಲ ಹಾಗು ಭಾರತ ದಂಡ ಸಂಹಿತೆಯ 317ನೇ ಪ್ರಕರಣದಡಿಯಲ್ಲಿ ಆರೋಪವನ್ನು ರೂಪಿಸಲಾಗಿರುವುದಿಲ್ಲವೆಂಬ ತೀರ್ಮಾನದ ಮೂಲಕ ಆಪಾದಿತರನ್ನು ಖುಲಾಸೆ ಮಾಡಿರುತ್ತಾರೆ.

6. ಅಪೀಲುದಾರ–ರಾಜ್ಯದ ಪರವಾಗಿ ಹಾಜರಾದ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ನ್ಯಾಯವಾದಿಗಳಾದ ಶ್ರೀ ಎಸ್. ರಾಚಯ್ಯನವರು, ದಾಖಲೆ ಮೇಲಿನ ಇಡೀ ವಸ್ತು ವಿಷಯದ ಮೂಲಕ, ಕುಕ್ಕೆ ಸುಬ್ರಮಣ್ಯದ ಗ್ರಾಮಸ್ಥರ ಪ್ರಾಸಿಕ್ಯೂಷನ್‌ನ ವಾದಕ್ಕೆ ಪ್ರತಿಕೂಲವಾಗುವಂತೆ ತಿರುಗಿಸಿದ್ದಾಗ್ಯೂ, ಎಲ್ಲಾ ಅವಶ್ಯಕ ಸಂದರ್ಭಗಳನ್ನು ಪ್ರಾಸಿಕ್ಯೂಷನ್ ಮೂಲಕ ರುಜುವಾತುಪಡಿಸಲಾಗಿರುತ್ತದೆ; ಆಪಾದಿತ ಸಂಖ್ಯೆ.2 ಮೃತವಾಗಿ ಕಂಡುಬಂದಂಥ ಮರಣ ಹೊಂದಿದ ಮಗುವಿಗೆ ಜನ್ಮ ನೀಡಿರುವ ವಿಷಯ ರುಜುವಾತಾಗಿರುತ್ತದೆ. ದಿನಾಂಕ 6.3.2011 ರಂದು ಬೆಂಗಳೂರಿನ ಏರ್ ಫೋರ್ಸ್ ಕಮಾಂಡ್ ಆಸ್ಪತ್ರೆಯಲ್ಲಿ ಮಗು ಜನಿಸಿರುತ್ತದೆ ಎಂಬುದು ಸಹ ರುಜುವಾತಾಗಿರುತ್ತದೆ; ಡಿಎನ್‌ಎ ಪರೀಕ್ಷೆ ನಡೆಸಿದಂಥ ವೈಜ್ಞಾನಿಕ ಅಧಿಕಾರಿಗಳ ವರದಿಯು ಆಪಾದಿತ ಸಂಖ್ಯೆ.1 ಹಾಗು 2 ಇವರುಗಳಿಗೆ ಜನಿಸಿರುವ ಮಗುವೆಂಬುದನ್ನು ಸ್ಪಷ್ಟಪಡಿಸಿರುತ್ತದೆ; ಆಪಾದಿತ ಸಂಖ್ಯೆ.1 ದೂರವಾಣಿ ಕರೆಯ ವಿವರಗಳು ಹಾಗೂ ಪ್ರಾ.ಸಾ.2 ದಿನಾಂಕ 31.03.2011 ರಂದು ಕುಕ್ಕೆ ಸುಬ್ರಮಣ್ಯದಲ್ಲಿ ಹಾಜರಿದ್ದರೆಂಬುದನ್ನು ಬಹಿರಂಗಪಡಿಸುತ್ತವೆ. ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ಆಪಾದಿತ ಸಂಖ್ಯೆ.1ರ ಹೇಳಿಕೆಯೂ ಸಹ ಕುಕ್ಕೆ ಸುಬ್ರಮಣ್ಯಕ್ಕೆ ಆಪಾದಿತರು ಮಗುವನ್ನು ಎತ್ತಿಕೊಂಡು ಹೋಗಿದ್ದರೆಂಬುದನ್ನು ಹಾಗೂ ಅಲ್ಲಿ ಕೊಲೆ ಮಾಡಿರುತ್ತಾರೆಂಬುದನ್ನು ಬೆಂಬಲಿಸುತ್ತದೆ. ಈ ಆಧಾರದ ಮೇಲೆ, ಭಾರತ ದಂಡ ಸಂಹಿತೆಯಡಿಯಲ್ಲಿ ಆಪಾದಿತರ ಅಪರಾಧ ನಿರ್ಣಯಕ್ಕೆ ಸಂಬಂಧಿಸಿದ ಅಧೀನ ನ್ಯಾಯಾಲಯದ ತೀರ್ಪನ್ನು ರದ್ದುಪಡಿಸಬೇಕೆಂದು ಕೋರಲಾಗಿರುತ್ತದೆ.

ಇದಕ್ಕೆ ಪ್ರತಿಯಾಗಿ, ಆಪಾದಿತರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀಮತಿ ಅರ್ಚನಾ ಮೂರ್ತಿಯವರು ಭಾರತ ದಂಡ ಸಂಹಿತೆಯ 302ನೇ

ಪ್ರಕರಣದಡಿಯಲ್ಲಿ ಆಪಾದಿತರನ್ನು ಖುಲಾಸೆಗೊಳಿಸಿರುವಲ್ಲಿ ಅಧಿವಿಚಾರಣಾ ನ್ಯಾಯಾಲಯವು, ತಳೆದ ನಿರ್ಣಯವು ಸಮರ್ಥನೀಯವಾಗಿರುತ್ತದೆಂದು ವಾದಿಸಿ ಅಧೀನ ನ್ಯಾಯಾಲಯದ ತೀರ್ಪಿಗೆ ಪೂರಕವಾಗಿ ವಾದಿಸಿರುತ್ತಾರೆ; ಇದು, ಮಗುವನ್ನು ಆಪಾದಿತರು ಕೊಂದಿದ್ದಾರೆಂಬುದು ಪ್ರಾಸಿಕ್ಯೂಷನ್‌ರವರ ನಿರ್ದಿಷ್ಟವಾದ ವಾದವಾಗಿರುವುದರಿಂದ, ಅಂಥ ನಿರ್ದಿಷ್ಟವಾದ ವಾದವನ್ನು, ಸಂದೇಹವನ್ನು ಮೀರಿ, ಪ್ರಾಸಿಕ್ಯೂಷನ್‌ನಿಂದ ರುಜುವಾತು ಪಡಿಸಲಾಗಿರುವುದಿಲ್ಲ; ಅಧಿವಿಚಾರಣಾ ನ್ಯಾಯಾಲಯವು ಆಪಾದಿತರ ಖುಲಾಸೆ ಮಾಡಿರುವುದು ನ್ಯಾಯಸಮ್ಮತವಾಗಿದೆಯೆಂದು ನಿವೇದಿಸಿದ್ದಾರೆ.

7. ಮತ್ತಷ್ಟು ಮುಂದುವರೆಯುವುದಕ್ಕೆ ಮೊದಲು, ಸಂಕ್ಷಿಪ್ತವಾಗಿ ಪ್ರತಿಯೊಬ್ಬ ಸಾಕ್ಷಿದಾರನ ಸಾಕ್ಷ್ಯವನ್ನು ಟಿಪ್ಪಣಿ ಮಾಡಿಕೊಳ್ಳುವುದು ಉತ್ತಮವಾದುದಾಗಿರುತ್ತದೆ:

ಪ್ರಾ.ಸಾ.1 ಕುಕ್ಕೆ ಸುಬ್ರಮಣ್ಯದ ನಿವಾಸಿಯಾಗಿರುತ್ತಾರೆ, ಈಕೆ, ನಿಶಾನೆ ಪಿ.1ರ ಮೇರೆಗೆ ಸುಬ್ರಮಣ್ಯ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತಾರೆ. ಇದನ್ನು ಆಧರಿಸಿ ಅಪರಾಧ ಸಂಖ್ಯೆ.17/2011ನ್ನು ನೋಂದಾಯಿಸಿಕೊಳ್ಳಲಾಗಿರುತ್ತದೆ; ಆಕೆಯ ದೂರು ಬೀದಿ ನಾಯಿಯೊಂದು ಹೆಣ್ಣು ಮಗುವಿನ ಮೃತದೇಹವನ್ನು ಎಳೆದಾಡಿಕೊಂಡು ಬಂದಿದ್ದನ್ನು, ಆಕೆ ನಾಯಿಯನ್ನು ಓಡಿಸಿದ್ದರಿಂದ, ನಾಯಿ ಆಕೆಯ ಮನೆಯ ಕಾಂಪೌಂಡ್‌ನಲ್ಲಿಯೇ ಹೆಣ್ಣು ಮಗುವಿನ ಮೃತದೇಹವನ್ನು ಬಿಟ್ಟು ಹೋಗಿದ್ದಾಗಿ, ಆಕೆ ಇದನ್ನು ತನ್ನ ಬಾಡಿಗೆದಾರ ವ್ಯಕ್ತಿಗೆ ತಿಳಿಸಿ, ತರುವಾಯ ದೂರನ್ನು ದಾಖಲಿಸಿದ್ದು, ವಿಷಯಗಳನ್ನು ಬಹಿರಂಗಪಡಿಸುತ್ತದೆ. ನಿಶಾನೆ ಪಿ.1ರಲ್ಲಿ ಕಂಡುಬಂದಂಥ ಇದೇ ಹೇಳಿಕೆಯು ಈ ನ್ಯಾಯಾಲಯದ ಎದುರು ಈಕೆ ಸಾಕ್ಷ್ಯವಾಗಿಯೂ ಹೇಳಿರುತ್ತಾಳೆ.

ಪ್ರಾ.ಸಾ.2 ರಿಂದ 6 ರವರುಗಳು, ಆಪಾದಿತರು ಸ್ನಾನ ಘಟ್ಟ ಅಂದರೆ ಕುಮಾರಧಾರ ನದಿಯ ದಂಡೆಯ ಕಡೆಗೆ ಮಗುವನ್ನು ಎತ್ತಿಕೊಂಡು ಹೋದುದನ್ನು ಹಾಗು ಹಿಂದಿರುಗಿ ಬರುವಾಗ ಮಗುವಿಲ್ಲದೆ ಬಂದುದನ್ನು ನೋಡಿ ಆಪಾದಿತರನ್ನು

ಶಂಕಿಸಿ, ಪೊಲೀಸ್ ಠಾಣೆಗೆ ಅವರನ್ನು ಕರೆದುಕೊಂಡು ಹೋದುದಾಗಿ, ಹೇಳಿಕೆ ನೀಡಿರುತ್ತಾರೆ. ಆದರೆ ಅವರು ಪ್ರಾಸಿಕ್ಯೂಷನ್‌ನ ವಾದವನ್ನು ಬೆಂಬಲಿಸಿರುವುದಿಲ್ಲ ಹಾಗೂ ಅವರು ಪ್ರಾಸಿಕ್ಯೂಷನ್‌ನ ವಾದಕ್ಕೆ ಪ್ರತಿಕೂಲವಾಗಿ ಹೇಳಿಕೆ ನೀಡಿರುತ್ತಾರೆ.

ಪ್ರಾ.ಸಾ.7 ಮತ್ತು 8 ಅನುಕ್ರಮವಾಗಿ ಆಪಾದಿತ ಸಂ.2ರ ತಾಯಿ ಹಾಗು ತಂದೆಯಾಗಿರುತ್ತಾರೆ. ಅವರಿಬ್ಬರೂ ಪ್ರಾಸಿಕ್ಯೂಷನ್‌ನ ವಾದವನ್ನು ಬೆಂಬಲಿಸುವುದಿಲ್ಲ. ಪ್ರಾ.ಸಾ.9 ಆಪಾದಿತ ಸಂ.1 ಹಾಗು 2ರ ವಿವಾಹದ ಬಗ್ಗೆ ಸಾಕ್ಷ್ಯ ಹೇಳಿದಂತಹ ಸಾಕ್ಷ್ಯಗಳಾಗಿರುತ್ತಾರೆ. ಪ್ರಾ.ಸಾ.10, ಪ್ರಾ.ಸಾ.1ರ ಕಾಂಪೌಂಡ್ ಬಳಿ ಮಗುವಿನ ಮೃತದೇಹವನ್ನು ನೋಡಿದುದಾಗಿ ಸಾಕ್ಷ್ಯವನ್ನು ಹೇಳಿರುತ್ತಾರೆ. 45–50 ಆಟೋ ರಿಕ್ಷಾ ಚಾಲಕರು ಸ್ಥಳದಲ್ಲಿದ್ದರು. ಪ್ರಾ.ಸಾ.10, ಮಗುವಿನ ಮೃತದೇಹವನ್ನು ಕಂಡ ದೃಶ್ಯಕ್ಕೆ ಸಂಬಂಧಿಸಿದ ನಿಶಾನೆ ಪಿ.4–ಪಂಚನಾಮೆಕ್ಕೆ ಸಾಕ್ಷಿಯಾಗಿರುತ್ತಾರೆ. ಪ್ರಾ.ಸಾ.11 ಪಂಚನಾಮೆ ನಿಶಾನೆ ಪಿ.12 ಹಾಗು ಪಿ.13ಕ್ಕೆ ಸಾಕ್ಷಿಯಾಗಿರುತ್ತಾರೆ; ಪ್ರಾ.ಸಾ.12, ಪಂಚನಾಮೆ ನಿಶಾನೆ ಪಿ.14ಕ್ಕೆ ಸಾಕ್ಷಿಯಾಗಿರುತ್ತಾರೆ.

ಪ್ರಾ.ಸಾ.13 ಅರಣ್ಯ ಇಲಾಖೆಯ ಉದ್ಯೋಗಿಯಾಗಿದ್ದು, ಪ್ರಾ.ಸಾ.1 ರವರಿಗೆ ಸಂಬಂಧಿಸಿದ ಮನೆಯ ಬಾಡಿಗೆದಾರರಾಗಿರುತ್ತಾರೆ. ಪ್ರಾ.ಸಾ.1 ಮನೆಯ ಕಾಂಪೌಂಡ್ ಬಳಿ ಹೆಣ್ಣು ಮಗುವಿನ ಮೃತದೇಹ ಬಿದ್ದಿರುವ ಸಂಗತಿಯನ್ನು ಪ್ರಾ.ಸಾ.13 ಇವರಿಗೆ ತಿಳಿಸಿರುತ್ತಾರೆ. ತರುವಾಯ ಇವರು ಪೊಲೀಸರಿಗೆ ಮಾಹಿತಿ ನೀಡಿರುತ್ತಾರೆ. ಪ್ರಾ.ಸಾ.14, 15 ಹಾಗು 18 ರವರುಗಳು, ಬೇರೆ, ಬೇರೆ ಮಟ್ಟಗಳಲ್ಲಿ ತನಿಖೆ ನಡೆಸುವಲ್ಲಿ ಪಾಲ್ಗೊಂಡಿದ್ದಂಥ ಪೊಲೀಸ್ ಕಾನ್‌ಸ್ಟೇಬಲ್ ರವರುಗಳಾಗಿರುತ್ತಾರೆ. ಪ್ರಾ.ಸಾ.16 ವೈದ್ಯರಾಗಿದ್ದು, ಮೃತ ಮಗುವಿನ ದೇಹದ ಮರಣೋತ್ತರ ಪರೀಕ್ಷೆಯನ್ನು ಮಾಡಿರುತ್ತಾರೆ. ನಿಶಾನೆ ಪಿ.17 ಮರಣೋತ್ತರ ವರದಿಯಾಗಿರುತ್ತದೆ. ಪ್ರಾ.ಸಾ.19 ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ರವರಾಗಿರುತ್ತಾರೆ. ಇವರು ಅಪರಾಧ ಸಂಖ್ಯೆ 17/2011 ರಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ ಹಾಗು ಪ್ರಥಮ ಮಾಹಿತಿ ವರದಿಯನ್ನು ಅಧಿಕಾರ ವ್ಯಾಪ್ತಿಯಿರುವ ಮ್ಯಾಜಿಸ್ಟ್ರೇಟರ್‌ರಿಗೆ ವರದಿ ಮಾಡಿರುತ್ತಾರೆ. ಇವರು ಭಾಗಶಃ ತನಿಖೆಯನ್ನು ನಡೆಸಿರುತ್ತಾರೆ. ಪಿಡಬ್ಲ್ಯೂ.20 ಸಹಾ ಪೊಲೀಸ್

ಇನ್ಸ್‌ಪೆಕ್ಟರ್ ಆಗಿದ್ದು, ಇವರೂ ಸಹ ಭಾಗಶಃ ತನಿಖೆಯನ್ನು ಕೈಗೊಂಡಿರುತ್ತಾರೆ. ದಿನಾಂಕ 6.4.2011 ರಂದು ಆಪಾದಿತರನ್ನು ದಸ್ತಗಿರಿ ಮಾಡಿದ ತರುವಾಯ, ಆಪಾದಿತರ ಹೇಳಿಕೆಯನ್ನು ದಾಖಲಿಸಲಾಗಿರುತ್ತದೆ. ಇವರು, ಡಿಎನ್‌ಎ ಪರೀಕ್ಷೆಗಾಗಿ ಮಗುವಿನ ಮೂಳೆಗಳು ಹಾಗು ಇತರೆ ಅಂಗಗಳಿಗೆ ಸಂಬಂಧಿಸಿದ ವೈದ್ಯರುಗಳನ್ನು ಕೋರಿರುತ್ತಾರೆ. ಅಲ್ಲದೆ ಸುಳ್ಯ ನ್ಯಾಯಾಲಯದ ಮುಂದೆ ಇವರು ಆಪಾದಿತರಿಬ್ಬರನ್ನು ಡಿಎನ್‌ಎ ಪರೀಕ್ಷೆಯ ಉದ್ದೇಶಕ್ಕಾಗಿ ಹಾಜರುಪಡಿಸಿರುತ್ತಾರೆ. ಪ್ರಾ.ಸಾ.21 ರವರಿಗೆ ತನಿಖೆಗಾಗಿ ಹಾಜರುಪಡಿಸಿರುತ್ತಾರೆ. ತರುವಾಯ, ಪ್ರಾ.ಸಾ.21 ತನಿಖೆ ಆರಂಭಿಸಿ, ಆರೋಪ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಪ್ರಾ.ಸಾ.22 ವೈಜ್ಞಾನಿಕ ಅಧಿಕಾರಿಯಾಗಿರುತ್ತಾರೆ. ಇವರಿ ಡಿಎನ್‌ಎ ಪರೀಕ್ಷೆ ನಡೆಸಿರುತ್ತಾರೆ. ಪ್ರಾಸಿಕ್ಯೂಷನ್ ವಾದವನ್ನು ಸಂಪೂರ್ಣವಾಗಿ ಬೆಂಬಲಿಸುವಂಥ ನಿಶಾನೆ ಪಿ.35ರ ಮೇರೆಗೆ ಪ್ರಮಾಣ ಪತ್ರವನ್ನು ನೀಡಿರುತ್ತಾರೆ.

8. ಪ್ರಕರಣವು ಸಾಂದರ್ಭಿಕ ಸಾಕ್ಷ್ಯಗಳನ್ನು ಆಧರಿಸಿರುತ್ತದೆ. ಪ್ರಾಸಿಕ್ಯೂಷನ್ ಉದಾಹರಿಸಿರುವ ಸಂದರ್ಭಗಳು ಈ ಮುಂದಿನಂತಿವೆ:

(ಎ) ಮೃತಗೊಂಡ ಮಗು ದಿನಾಂಕ 06.03.2011 ರಂದು ಬೆಂಗಳೂರಿನ ಏರ್ ಫೋರ್ಸ್ ಕಂಮಾಂಡ್ ಆಸ್ಪತ್ರೆಯಲ್ಲಿ ಜನಿಸಿರುತ್ತದೆ. ನಿಶಾನೆ ಪಿ.23 ಆಸ್ಪತ್ರೆ ಪ್ರಾಧಿಕಾರಿಗಳು ನೀಡಿರುವ ಪ್ರಮಾಣ ಪತ್ರವಾಗಿದ್ದು, ಕಮಾಂಡ್ ಆಸ್ಪತ್ರೆಯು ನೀಡಿರುವ ಜನ್ಮ ಪ್ರಮಾಣ ಪತ್ರವು, ಮಗುವಿನ ತಂದೆ–ತಾಯಿಯಾದ ಹೆಸರುಗಳನ್ನು ಶ್ರೀಮತಿ ನಾಗರತ್ನ ಹಾಗೂ ಶ್ರೀ ಶೇಖರ್.ವಿ. ಹರಿಕಾಂತ್ (ಇಲ್ಲಿನ ಆಪಾದಿತರು) ಎಂದು ಹೇಳುತ್ತದೆ.

(ಬಿ) ಆಪಾದಿತ ಸಂಖ್ಯೆ.2ನ್ನು, ಪ್ರಾ.ಸಾ.17–ವೈದ್ಯರು ತಪಾಸಣೆ ಮಾಡಿದ್ದು, ಈಕೆಯನ್ನು ರೇಡಿಯೋಲಾಜಿಕಲ್ ಪರೀಕ್ಷೆಗೆ ಒಳಪಡಿಸಲಾಗಿರುತ್ತದೆ.

(ಸಿ) ಪ್ರಾ.ಸಾ.17–ಡಾ॥ ವಿಜಯಾ ಕುಮಾರ್ ರವರು, ನಿಶಾನೆ ಪಿ.18ರ ಮೇರೆಗೆ, ಆಪಾದಿತ ಸಂ.2ನ್ನು ತಪಾಸಣೆ ಮಾಡಿದ ದಿನಾಂಕಕ್ಕೆ ಮೊದಲು ಎರಡು ತಿಂಗಳೊಳಗೆ ಹೆರಿಗೆಯಾಗಿರುವಂಥ ದೇಹವಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತಾರೆ. ಡಿಎನ್ಎ ಪರೀಕ್ಷೆಯನ್ನು ಪ್ರಾ.ಸಾ.22 ನಡೆಸಿರುತ್ತಾರೆ. ನಿಶಾನೆ ಪಿ.35ರ ಮೇರೆಗಿನ ವರದಿಯು, ಪ್ರಶ್ನಿತ ಮಗು ಆಪಾದಿತ ಸಂಖ್ಯೆ.1 ಹಾಗೂ 2 ಇವರುಗಳ ಮಗುವಾಗಿರುತ್ತದೆಂಬುದನ್ನು ಬಹಿರಂಗಪಡಿಸುತ್ತದೆ.

(ಡಿ) ಆಪಾದಿತರು, ಘಟನೆ ನಡೆದ ಕೂಡಲೇ ಅಪರಾಧದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿರುತ್ತಾರೆ; ಅವರು ಪೊಲೀಸರು ಸಾರ್ವಜನಿಕರಿಗೆ ಅವರುಗಳು ಪರಿಪ್ರಶ್ನಿಸಿದಾಗ ತಪ್ಪು ಮಾಹಿತಿಯನ್ನು ನೀಡಿರುತ್ತಾರೆ.

9. ಈ ಹಿಂದೆ ಹೇಳಲಾದಂತೆ, ಮಗುವು ದಿನಾಂಕ 6.3.2011 ರಂದು ಆಪಾದಿತರ ಮಗುವಾಗಿ ಜನಿಸಿರುತ್ತದೆ; ಮಗುವಿನ ಜನನಕ್ಕೆ 4–5 ತಿಂಗಳುಗಳ ಮೊದಲು, ಆಪಾದಿತ ಸಂಖ್ಯೆ.1 ಮತ್ತು 2 ಬೆಂಗಳೂರಿನ ದೇವಸ್ಥಾನದಲ್ಲಿ ವಿವಾಹವಾಗಿರುತ್ತಾರೆ. ವಿವಾಹವನ್ನು ಬೆಂಗಳೂರಿನಲ್ಲಿನ ಸಬ್–ರಿಜಿಸ್ಟ್ರಾರ್‌ರವರ ಕಛೇರಿಯಲ್ಲಿ ನೋಂದಾಯಿಸಲಾಗಿರುತ್ತದೆ. ಮದುವೆಯಾದ ಕೆಲವು ದಿನಗಳೊಳಗೆ ಮಗು ಜನಿಸಿರುತ್ತದೆ; ಇದರರ್ಥ ಆಪಾದಿತ ಸಂಖ್ಯೆ.2, ಆಪಾದಿತ ಸಂಖ್ಯೆ.1 ರೊಂದಿಗೆ ವಿವಾಹವಾಗುವಾಗ 7 ರಿಂದ 8 ತಿಂಗಳ ಗರ್ಭಿಣಿಯಾಗಿದ್ದಳು ಎಂಬುದಾಗಿರುತ್ತದೆ. ಮಗುವು ದಿನಾಂಕ 31.3.2011 ರಂದು ಮೃತಪಟ್ಟಿರುತ್ತದೆ; ಮಗುವಿನ ಮೃತದೇಹವು ದಿನಾಂಕ 4.4.2011 ರಂದು, ಪ್ರಾ.ಸಾ.1 ರವರ ಮನೆಯ ಎದುರು ಕಂಡು ಬಂದಿರುತ್ತದೆ ಹಾಗೂ ಆಪಾದಿತರನ್ನು ದಿನಾಂಕ 6.4.2011 ರಂದು ದಸ್ತಗಿರಿ ಮಾಡಿರುತ್ತಾರೆ.

10. ದಾಖಲೆಗಳನ್ನು ನೋಡಿದಾಗ, ಆಪಾದಿತರು, ತಮ್ಮ ವಿವಾಹಕ್ಕೆ ಮೊದಲು ಪ್ರೇಮಿಗಳಾಗಿ ಹಾಗೂ ವಿವಾಹದ ತರುವಾಯ ಪತಿ–ಪತ್ನಿಯರಾಗಿ ದೈಹಿಕ ಸಂಪರ್ಕ ಇತ್ತು ಎಂಬುದರ ಬಗ್ಗೆ ಯಾವುದೇ ಗಂಭೀರ ವಿವಾದ ಮಾಡಿರುವುದಿಲ್ಲ. ವಿವಾಹವಾದ ಕೂಡಲೇ ಮಗುವನ್ನು ಪಡೆದಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ಗಂಭೀರ ವಿವಾದವಿರುವುದಿಲ್ಲ; ಅಲ್ಲದೆ ಪ್ರಸ್ತಾಪಿತ ಕಾಲಾವಧಿಯಲ್ಲಿ ಕಾಲಕ್ಕೆ ಸುಬ್ರಮಣ್ಯಕ್ಕೆ ತೆರಳಿದ್ದರು ಎಂಬ ಬಗ್ಗೆಯೂ ಯಾವುದೇ ಗಂಭೀರ ವಿವಾದವಿರುವುದಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ.

11. ನಿಶಾನೆ ಪಿ.23, ದಿನಾಂಕ 06.03.2011 ರಂದು ಬೆಂಗಳೂರಿನ ಏರ್ ಫೋರ್ಸ್ ಕಂಮಾಂಡ್ ಆಸ್ಪತ್ರೆಯು ನೀಡಿರುವ ಜನನ ಪ್ರಮಾಣ ಪತ್ರವಾಗಿರುತ್ತದೆ. ನಿಶಾನೆ ಪಿ.25ರ ಮೇರೆಗಿನ ವಿವಾಹ ನೋಂದಣಿ ಪ್ರಮಾಣ ಪತ್ರವು, 21.10.2010 ರಂದು ವಿಧಿವತ್ತಾಗಿ ವಿವಾಹವು ನಡೆದಿದ್ದು, ದಿನಾಂಕ 26.10.2010 ರಂದು ನೋಂದಣಿಯಾಗಿರುತ್ತದೆಂಬುದನ್ನು ಬಹಿರಂಗಪಡಿಸುತ್ತಿದ್ದು, ಇದರಿಂದ ವಿವಾಹವಾದ ದಿನಾಂಕದಿಂದ 4.1/2 ತಿಂಗಳೊಳಗೆ ಮಗು ಜನಿಸಿರುತ್ತದೆಂಬ ವಿಷಯವು ತಿಳಿದು ಬರುತ್ತದೆ. ಇದರ ಅರ್ಥ, ಆಪಾದಿತ ಸಂಖ್ಯೆ.2 ವಿವಾಹವಾಗುವ ಸಮಯದಲ್ಲಿ 4.1/2 ತಿಂಗಳ ಗರ್ಭಿಣಿಯಾಗಿದ್ದಳೆಂಬುದಾಗಿರುತ್ತದೆ. ಇದರಿಂದ ಕೂಡ ಆಪಾದಿತ ಸಂಖ್ಯೆ.1 ಹಾಗು 2 ವಿವಾಹಕ್ಕೆ ಮೊದಲು ಪರಸ್ಪರ ದೈಹಿಕ ಸಂಪರ್ಕ ಹೊಂದಿದ್ದರೆಂಬುದರಲ್ಲಿ, ಆಪಾದಿತ ಸಂಖ್ಯೆ.2 ಗರ್ಭವತಿಯಾಗಿದ್ದಳೆಂಬುದರಲ್ಲಿ ಹಾಗೂ ಮಗುವು ಜನಿಸಿರುತ್ತದೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ. ಅಲ್ಲದೆ, ನಿಶಾನೆ ಪಿ.23 ರಲ್ಲಿಯೂ ಕೂಡ, ಶ್ರೀ ಶೇಖರ್ ವಿ. ಹರಿಕಾಂತ್ (ಆಪಾದಿತ ಸಂ.1) ರವರ ಪತ್ನಿ ಶ್ರೀಮತಿ ನಾಗರತ್ನ (ಆಪಾದಿತ ಸಂ.2) ರವರಿಗೆ ಮಗಳು ಜನಿಸಿರುತ್ತಾಳೆಂದು ಸ್ಪಷ್ಟವಾಗಿ ನಮೂದಿಸಿದೆ. ಆಪಾದಿತ ಸಂಖ್ಯೆ.1ರ ಹುದ್ದೆಯ ಎಎಸ್‌ಸಿ ಕೇಂದ್ರ ಹಾಗೂ ಕಾಲೇಜಿನ ಘಟಕದಲ್ಲಿ ಕಾರ್ಯನಿರ್ವಹಿಸುವ ಎಸ್‌ಇಪಿ ದರ್ಜೆಯನ್ನು ಹೊಂದಿರುವ ಸಂ.14843452 ಎಂದು ನಮೂದಿಸಲಾಗಿದೆ. ಮಗು ದಿನಾಂಕ 6.3.2011 ರಂದು 18.50 ಗಂಟೆಗೆ ಜನಿಸಿರುತ್ತದೆ. ಮಗುವಿನ ತೂಕ 2.7 ಕಿ.ಗ್ರಾಂ. ಆಗಿರುತ್ತದೆ. ಜನನ ಪ್ರಮಾಣ ಪತ್ರ ನಿಶಾನೆ ಪಿ.23ನ್ನು

ಭಾಗಶಃ ತನಿಖೆ ಮಾಡಿದಂಥ ಪೊಲೀಸ್ ಇನ್ಸ್‌ಪೆಕ್ಟರ್ ಪ್ರಾ.ಸಾ.21–ಇವರ ಮೂಲಕ ಗುರುತು ಮಾಡಿಸಲಾಗಿರುತ್ತದೆ. ಪ್ರತಿವಾದಿ ವಕೀಲರು ಅಧಿವಿಚಾರಣಾ ನ್ಯಾಯಾಲಯದ ಎದುರು ಸಾಕ್ಷ್ಯವನ್ನು ದಾಖಲಿಸುವ ಸಮಯದಲ್ಲಿ ಸದರಿ ಪ್ರಮಾಣ ಪತ್ರವನ್ನು ಹಾಜರುಪಡಿಸುವುದಕ್ಕೆ ಸಂಬಂಧಿಸಿದಂತೆ ಆಕ್ಷೇಪಿಸಿರುವುದಿಲ್ಲ. ಮೇಲೆ ನಮೂದಿಸಿದಂತೆ, ಪ್ರತಿವಾದಿ ವಕೀಲರು ಮಗುವಿನ ಜನನಕ್ಕೆ ಹಾಗೂ ಮಗುವಿನ ತಂದೆ–ತಾಯಿ (ಆಪಾದಿತರಿಬ್ಬರೂ)ಯರುಗಳ ಹೆಸರುಗಳಿಗೆ ಸಂಬಂಧಿಸಿದಂತೆ ಗಂಭೀರವಾದ ವಿವಾದಾಂಶವಾಗಿರುವುದಿಲ್ಲ. ಹಾಗಾಗಿ, ಮಗುವು, ದಿನಾಂಕ 6.3.2011 ರಂದು ಜನಿಸಿದ್ದು, ಮಗುವಿನ ತಂದೆ–ತಾಯಿಯರುಗಳ ಹೆಸರುಗಳು ಅನುಕ್ರಮವಾಗಿ ಆಪಾದಿತ ಸಂ.1 ಹಾಗೂ 2 (ಶ್ರೀಮತಿ ನಾಗರತ್ನ ಹಾಗೂ ಶ್ರೀ ಶೇಖರ್ .ವಿ ಹರಿಕಾಂತ್) ಆಗಿರುತ್ತದೆ ಎಂಬುದು ಸ್ಪಷ್ಟವಾಗಿರುತ್ತದೆ.

12. ಪ್ರಾಸಿಕ್ಯೂಷನ್, ತನ್ನ ವಾದವನ್ನು ಬೆಂಬಲಿಸುವ ದೃಷ್ಠಿಯಿಂದ, ಆಪಾದಿತ ಸಂ.2 ರವರಿಗೆ ರೇಡಿಯೋಲಾಜಿಕಲ್ ಪರೀಕ್ಷೆ ಮಾಡಿದ್ದಂಥ ವೈದ್ಯರು– ಪ್ರಾ.ಸಾ.17– ಇವರು ಮತ್ತೊಮ್ಮೆ ವಿಚಾರಣೆ ಮಾಡಲಾಯಿತು. ಪ್ರಾ.ಸಾ.17–ವೈದ್ಯರು, ಪರೀಕ್ಷೆ ಮಾಡಿದ ದಿನಾಂಕಕ್ಕೆ ಪೂರ್ವದಲ್ಲಿ ಎರಡು ತಿಂಗಳೊಳಗೆ ಮಗುವಿಗೆ ಜನ್ಮ ನೀಡಿರುತ್ತಾಳೆಂದು ಸಾಕ್ಷ್ಯ ನೀಡಿರುತ್ತಾರೆ. ಪ್ರಾ.ಸಾ.17–ವೈದ್ಯರು ನೀಡಿರುವ ಪ್ರಮಾಣ ಪತ್ರವು ನಿಶಾನೆ ಪಿ.18 ಆಗಿರುತ್ತದೆ. ಈ ಆಯಾಮದಲ್ಲಿ ಪ್ರತಿವಾದ ಮಂಡಿಸಿದ ವಕೀಲರು ಪಾಟೀ ಸವಾಲನ್ನು ಮಾಡಿರುವುದಿಲ್ಲ. ಪ್ರಾ.ಸಾ.17 ಹೇಳಿರುವ ಸಾಕ್ಷ್ಯದಿಂದ ದಿನಾಂಕ 7.4.2011 ರಿಂದ ಎರಡು ತಿಂಗಳೊಳಗೆ ಮಗುವಿಗೆ ಆಪಾದಿತ–2 ಜನ್ಮ ನೀಡಿರುತ್ತಾಳೆಂಬುದು ಸ್ಪಷ್ಟವಾಗಿರುತ್ತದೆ. ದಿನಾಂಕ 07.4.2011 ರಂದು ರೇಡಿಯುಲಾಜಿಕಲ್ ಪರೀಕ್ಷೆಯುನ್ನು ಆಪಾದಿತ ಸಂಖ್ಯೆ.2 ರವರಿಗೆ ಮಾಡಲಾಗಿರುತ್ತದೆಂಬುದನ್ನು ಗಮನಿಸಿಕೊಳ್ಳುವುದು ಸೂಕ್ತವಾದುದಾಗಿರುತ್ತದೆ. ಪ್ರಾ.ಸಾ.17ರ ಸಾಕ್ಷ್ಯವು, ದಿನಾಂಕ 7.4.2011ಕ್ಕಿಂತ ಮೊದಲು 2 ತಿಂಗಳೊಳಗೆ ಪ್ರಶ್ನಿತ ಮಗುವಿಗೆ ಆಪಾದಿತ ಸಂಖ್ಯೆ.2 ಜನ್ಮ ನೀಡಿರುತ್ತಾಳೆಂಬ ಪ್ರಾಸಿಕ್ಯೂಷನ್ ವಾದವನ್ನು ಬೆಂಬಲಿಸುತ್ತದೆ.

13. ಡಿಎನ್‌ಎ ಗೆ ಸಂಬಂಧಿಸಿದ ಮೂರನೇ ಸಂದರ್ಭವನ್ನು ಕೂಡ ಯುಕ್ತ ಸಂದೇಹವನ್ನು ಮೀರಿ ಪ್ರಾಸಿಕ್ಯೂಷನ್ ರುಜುವಾತುಪಡಿಸಿರುತ್ತದೆ. ಡಿಎನ್‌ಎ ವರದಿಯು ನಿಶಾನೆ ಪಿ.35 ಆಗಿರುತ್ತದೆ. ವೈಜ್ಞಾನಿಕ ಅಧಿಕಾರಿ (ಪ್ರಾ.ಸಾ..22) ಡಿಎನ್‌ಎ ಪರೀಕ್ಷೆಯನ್ನು ನಡೆಸಿ, ವರದಿಯನ್ನು ನೀಡಿರುತ್ತಾರೆ.

ಪ್ರಾ.ಸಾ.16 ವೈದ್ಯರು ಮೃತದೇಹದ ಶವ ಪರೀಕ್ಷೆಯನ್ನು ನಡೆಸಿರುತ್ತಾರೆ. ಸದರಿ ವೈದ್ಯರು ಮಗುವಿನ ಕರುಳು ಹಾಗೂ ಯಕೃತ್ತುಗಳು ಕೊಳೆತು ಹೋಗಿದ್ದವು. ಎರಡೂ ಮೂತ್ರ ಪಿಂಡಗಳು, ಮೂತ್ರಕೋಶ ಹಾಗೂ ಜನನಾಂಗಗಳು ಹಾಳಾಗಿರಲಿಲ್ಲ ಹಾಗೂ ಕೊಳೆತಿರಲಿಲ್ಲ. ಈತ ಯಕೃತ್ತು, ಮಗುವಿನ ತೊಡೆಯಿಂದ ಮಾಂಸಖಂಡಗಳನ್ನು ಹಾಗೂ ಮಗುವಿನ ಎಡತೊಡೆಯ ಮೂಳೆಗಳನ್ನು ಡಿಎನ್‌ಎ ಪರೀಕ್ಷೆಗಾಗಿ ತೆಗೆದುಕೊಂಡು, ಮೂರು ಬಾಟಲ್‌ಗಳಲ್ಲಿ ತುಂಬಿ, ಅವುಗಳನ್ನು ಮೊಹರು ಮಾಡಿ, ತರುವಾಯ ಪರೀಕ್ಷೆಗಾಗಿ ಪೊಲೀಸರಿಗೆ ಮೊಹರು ಮಾಡಿದ ಬಾಟಲ್‌ಗಳನ್ನು ಹಸ್ತಾಂತರಿಸಿರುತ್ತಾರೆ. ರೇಡಿಯಾಲಾಜಿಕಲ್ ವರದಿಯನ್ನು ಪಡೆದ ತರುವಾಯ, ವೈದ್ಯರು ಮಗುವಿಗೆ ಸುಮಾರು 2 ತಿಂಗಳು ವಯಸ್ಸೆಂದು ಅಭಿಪ್ರಾಯಪಟ್ಟಿರುತ್ತಾರೆ. ದೇಹವು ಕೊಳೆತ ಸ್ಥಿತಿಯಲ್ಲಿದ್ದರಿಂದಾಗಿ, ಮರಣದ ಕಾರಣವನ್ನು ಮರಣೋತ್ತರ ಪರೀಕ್ಷೆಯನ್ನು ನಡೆಸಿದಂಥ ವೈದ್ಯರಿಂದ ಗುರುತಿಸಲಾಗಿರುವುದಿಲ್ಲ.

ಪ್ರಾ.ಸಾ.20 ಪೊಲೀಸ್ ಇನ್ಸ್‌ಪೆಕ್ಟರ್‌ರವರ ಸಾಕ್ಷ್ಯವು ಆಪಾದಿತರನ್ನು ಡಿಎನ್‌ಎ ಪರೀಕ್ಷೆಗೆ ಸಂಬಂಧಿಸಿದಂತೆ ರಕ್ತವನ್ನು ತೆಗೆದುಕೊಳ್ಳಲು ಮ್ಯಾಜಿಸ್ಟ್ರೇಟರ ಮುಂದೆ ಕರೆದೊಯ್ದಿಲಾಯಿತೆಂದೂ, ತರುವಾಯ, ಆಪಾದಿತರಿಬ್ಬರ ರಕ್ತವನ್ನು ಮ್ಯಾಜಿಸ್ಟ್ರೇಟರ್ ಮುಂದೆ ಸಂಗ್ರಹಿಸಲಾಯಿತೆಂದೂ, ಆಪಾದಿತರಿಂದ ಹಾಗೆ ಸಂಗ್ರಹಿಸಲಾದ ರಕ್ತದ ಮಾದರಿಯನ್ನು ಹಾಗೂ ಮಗುವಿನ ಮೃತದೇಹದಿಂದ ತೆಗೆದುಕೊಂಡಂಥ ಮೂಳೆಗಳು, ಯಕೃತ್ತುಗಳು ಹಾಗೂ ಮಾಂಸಖಂಡಗಳನ್ನು ಡಿಎನ್‌ಎ ಪರೀಕ್ಷೆಗಾಗಿ ಪೊಲೀಸ್ ಇನ್ಸ್‌ಪೆಕ್ಟರ್‌ರವರ (ಪ್ರಾ.ಸಾ.20) ಮೂಲಕ ಕಳುಹಿಸಲಾಯಿತೆಂಬುದು ಬಹಿರಂಗಪಡಿಸಿರುತ್ತದೆ. ಮೇಲೆ ನಮೂದಿಸಲಾದ

ವಾಸ್ತವಾಂಶಗಳನ್ನು ಕುರಿತಂತೆ ಯಾವುದೇ ಗಂಭೀರ ಪಾಟೀ ಸವಾಲು ನಡೆದಿರುವುದಿಲ್ಲ. ಹಾಗಾಗಿ ಮಗುವಿನ ಮೂಳೆಗಳ, ಮಾಂಸಖಂಡದ ಹಾಗೂ ಯಕೃತ್ತಿನ ಮಾದರಿಗಳು ಹಾಗೂ ಇಬ್ಬರು ಆಪಾದಿತರ ರಕ್ತದ ಮಾದರಿಗಳನ್ನು ಡಿಎನ್ಎ ಪರೀಕ್ಷೆಗೆ ಕಳುಹಿಸಲಾಗಿರುತ್ತದೆಂದು ಹಾಗೂ ಎಲ್ಲಾ ಅಂಥ ಮಾದರಿಗಳನ್ನು ಕಾನೂನಿನಡಿಯಲ್ಲಿ ಅಗತ್ಯಪಡಿಸಿದ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳು ಹಾಗೂ ವೈದ್ಯರಿಂದ ಸಂಗ್ರಹಿಸಲಾಯಿತೆಂದು ಪ್ರಾಸಿಕ್ಯೂಷನ್ ರುಜುವಾತುಪಡಿಸಿರುತ್ತದೆ. ಯಾವ ಮ್ಯಾಜಿಸ್ಟ್ರೇಟರ್ ಎದುರು ಆಪಾದಿತರ ರಕ್ತದ ಮಾದರಿಗಳನ್ನು ಸಂಗ್ರಹಿಸಲಾಯಿತೋ ಆ ಮ್ಯಾಜಿಸ್ಟ್ರೇಟರ ಮೊಹರು ಹಾಗೂ ಸಹಿಯನ್ನು ನಿಶಾನೆ ಪಿ.32 ಹಾಗೂ ಪಿ.34 ಗಳು ಹೊಂದಿರುತ್ತವೆ.

14. ಪ್ರಾ.ಸಾ.22 ವಿಧಿ ವಿಜ್ಞಾನ ಪ್ರಯೋಗಾಲಯದ ವೈಜ್ಞಾನಿಕ ಅಧಿಕಾರಿಯಾಗಿರುತ್ತಾರೆ. ಐದು ಮೊಹರು ಮಾಡಿದ ವಸ್ತುಗಳನ್ನು ತಮಗೆ ಕಳುಹಿಸಿರುವುದಾಗಿ ಸಾಕ್ಷ್ಯ ನೀಡಿದ್ದು, ಅವು ಈ ಮುಂದಿನಂತಿರುತ್ತದೆ:

(ಎ) ಮೃತದೇಹದಿಂದ ದಿನಾಂಕ 5.4.2011 ರಂದು ಸಂಗ್ರಹಿಸಿದ ಯಕೃತ್ತಿನ ಎರಡು ತುಂಡುಗಳನ್ನು ಒಳಗೊಂಡ ಪ್ಲಾಸ್ಟಿಕ್ ಡಬ್ಬಿ (ಬಾಬು ಸಂ.1).

(ಬಿ) ಮೃತದೇಹದಿಂದ 5.4.2011 ರಂದು ಸಂಗ್ರಹಿಸಿದ ಎಡತೊಡೆಯ ಮಾಂಸಖಂಡಗಳನ್ನು ಒಳಗೊಂಡ ಪ್ಲಾಸ್ಟಿಕ್ ಡಬ್ಬಿ (ಬಾಬು ಸಂ.2).

(ಸಿ) ದಿನಾಂಕ 5.4.2011 ರಂದು ಮರಣೋತ್ತರ ಪರೀಕ್ಷೆ ಮಾಡುವಾಗ ಮೃತದೇಹದಿಂದ ಇಡಿಯಾಗಿ ಸಂಗ್ರಹಿಸಿದ ತೊಡೆಯೆಲುಬನ್ನು ಒಳಗೊಂಡ ಪ್ಲಾಸ್ಟಿಕ್ ಡಬ್ಬಿ (ಬಾಬು ಸಂ.3).

(ಡಿ) ಶ್ರೀ ಶೇಖರ್ ವಿ. ಹರಿಕಾಂತ್ ಎಂಬ ಪುರುಷ ವ್ಯಕ್ತಿಯಿಂದ ಸಂಗ್ರಹಿಸಿದ ರಕ್ತದ ಮಾದರಿಯನ್ನು ಒಳಗೊಂಡ ಒಂದು ಮೊಹರು ಮಾಡಿದ ಟ್ಯೂಬು (ಬಾಬು ಸಂ.4). (ತಪ್ಪಾಗಿ ಬಾಬು ಸಂ.5 ಎಂದು ತೋರಿಸಲಾಗಿದೆ.)

(ಇ) ಶ್ರೀಮತಿ ನಾಗರತ್ನ ಎಂಬ ಮಹಿಳಾ ವ್ಯಕ್ತಿಯಿಂದ ಸಂಗ್ರಹಿಸಿದ ರಕ್ತದ ಮಾದರಿಯನ್ನು ಒಳಗೊಂಡ ಒಂದು ಮೊಹರು ಮಾಡಿದ ಟ್ಯೂಬು (ಬಾಬು ಸಂ.5) (ತಪ್ಪಾಗಿ ಬಾಬು ಸಂ.6 ಎಂದು ತೋರಿಸಲಾಗಿದೆ.)

ಇವರು ಮುಂದುವರೆದು, ಡಿಎನ್‌ಎ ಕೇಂದ್ರದಲ್ಲಿ ಡಿಎನ್‌ಎ ಪ್ರೊಫೈಲ್ ಪರೀಕ್ಷೆಗಾಗಿ ಯಕೃತ್ತು, ಮಾಂಸಖಂಡ, ತೊಡೆಯೆಲುಬು ಹಾಗೂ ರಕ್ತದ ಮಾದರಿಗಳನ್ನು ತೆಗೆದುಕೊಳ್ಳಲಾಗಿದೆಯೆಂದು ಸಾಕ್ಷ್ಯ ನೀಡಿರುತ್ತಾರೆ. ಕೋಡಿಂಗ್ ಹಾಗೂ ಡಿಕೋಡಿಂಗ್ ಮೂಲಕ ಪ್ರತೀ ಮಾದರಿಯ ಸಮಗ್ರತೆಗಾಗಿ ಯುಕ್ತ ಜಾಗ್ರತೆಯನ್ನು ತೆಗೆದುಕೊಳ್ಳಲಾಗಿತ್ತು. ಬಾಬು ಸಂ.1, 2, 3, 4, ಹಾಗು 5 ಇವುಗಳಲ್ಲಿ ಕಳುಹಿಸಿದ ಮಾದರಿಗಳಿಂದ ಡಿಎನ್‌ಎ ಯನ್ನು ಪ್ರತ್ಯೇಕವಾಗಿಯೇ ಇಡಲಾಗಿದೆ. ಮೇಲಿನ ಪ್ರತಿಯೊಂದು ಮಾದರಿಯಿಂದಲೂ **ಪಾಲಿಮರ್ಸ್ ಚೇನ್ ರಿಯಾಕ್ಷನ್ (ಡಿಸಿಆರ್) / ಬಹುರೂಪಕತೆಯ ಸರಣಿ ಪ್ರತಿಕ್ರಿಯೆ (ಪಿಸಿಆರ್)** ಮೂಲಕ ಡಿಎನ್‌ಎಯನ್ನು ಪಡೆದುಕೊಳ್ಳಲಾಗಿದೆ. ಪರಿಮಾಣೀಕರಿಸಲಾಗಿದೆ ಹಾಗೂ ವ್ಯಾಖ್ಯಾನಿಸಲಾಗಿದೆ; ಮಾದರಿಯನ್ನು ಪಿಸಿಆರ್ ವ್ಯಾಖ್ಯಾನಿತ ಎಸ್‌ಟಿಆರ್ ತಂತ್ರಗಳನ್ನು ಬಳಸಿ ರೂಪಿಸಲಾಗಿರುತ್ತದೆ. ಯುಕ್ತ ವಿಧಾನವನ್ನು ಅನುಸರಿಸಿದ ತರುವಾಯ, ವೈಜ್ಞಾನಿಕ ಅಧಿಕಾರಿಯು ನಿಶಾನೆ ಪಿ.35ರ ಮೇರೆಗೆ ವರದಿಯನ್ನು ನೀಡಿರುತ್ತಾರೆ. ಇವರು ತೀರ್ಮಾನವನ್ನು ತಿಳಿಸಲು ವಿವರಣಾತ್ಮಕವಾಗಿ ಕಾರಣಗಳನ್ನು ತಿಳಿಸಿರುತ್ತಾರೆ. ನಿಶಾನೆ ಪಿ.35 ರಲ್ಲಿದ್ದಂತೆ ಸದರಿ ವರದಿಯಲ್ಲಿ ಬಾಬು ಸಂ.3 ರಿಂದ ದೊರೆತ ವಿವರಣೆಯು ಡಿಎನ್‌ಎ ರೂಪಿಸಲು ಸಾಕಷ್ಟಾಗುವುದಿಲ್ಲವೆಂದೂ ಸಹ ಮಂಡಿಸಲಾಗಿರುತ್ತದೆ. ಹಾಗಾಗಿ, ವಾಸ್ತವವಾಗಿ, ಬಾಬು ಸಂ.1, 2, 4 ಹಾಗೂ

5 ಇವುಗಳು ಡಿಎನ್ಎ ರೂಪಿಸಲು ಸಾಕಷ್ಟಾಗಿದ್ದು ಅವುಗಳನ್ನು ಎಲ್ಲಾ ಪರೀಕ್ಷೆಗೂ ಒಳಪಡಿಸಲಾಗಿರುತ್ತದೆ. ಪ್ರಾ.ಸಾ.22–ವೈಜ್ಞಾನಿಕ ಅಧಿಕಾರಿಯು ಈ ಮುಂದಿನಂತೆ ತೀರ್ಮಾನಿಸಿರುತ್ತಾರೆ.

> *"ಯಕೃತ್ತು, ಮಾಂಸಖಂಡ ಹಾಗೂ ರಕ್ತದ ಮಾದರಿಗಳ ಡಿಎನ್ಎ ಪ್ರೊಫೈಲ್ ಫಲಿತಾಂಶಗಳಿಂದ ಈ ಮುಂದಿನ ಅಂಶಗಳು ಕಂಡು ಬಂದಿರುತ್ತವೆ:*
>
> *1) ಬಾಬು ಸಂಖ್ಯೆ 1 ಹಾಗೂ 2 ರಲ್ಲಿ ಕಳುಹಿಸಿದ ಯಕೃತ್ತು ಹಾಗೂ ಮಾಂಸಖಂಡಗಳು ಮೂಲತಃ ಮನುಷ್ಯನದಾಗಿದ್ದು, ಅದರಲ್ಲೂ ಹೆಣ್ಣಿನ ದೇಹದ ಅಂಗಗಳೇ ಆಗಿವೆ.*
>
> *2) ಬಾಬು ಸಂ.1 ಹಾಗೂ 2 ರಲ್ಲಿ ಯಾರ ಯಕೃತ್ತು ಹಾಗೂ ಮಾಂಸಖಂಡಗಳನ್ನು ಕಳುಹಿಸಲಾಯಿತ್ತೊ ಅಂಥ ವ್ಯಕ್ತಿಯ (ಮಗುವಿನ) ಡಿಎನ್ಎ ಪ್ರೊಫೈಲ್ ಶ್ರೀ ಶೇಖರ್ ವಿ. ಹರಿಕಾಂತ್ ಬಿನ್ ಶ್ರೀ ವಿಷ್ಣು ಹರಿಕಾಂತ್ ಇವರ ರಕ್ತದ ಮಾದರಿಯನ್ನು ಬಾಬು ಸಂಖ್ಯೆ.4ರಲ್ಲಿ ಕಳುಹಿಸಿದ್ದು, ಹಾಗೂ ಶ್ರೀಮತಿ ನಾಗರತ್ನ ಕೋಂ ಶ್ರೀ ಶೇಖರ್ ವಿ. ಹರಿಕಾಂತ್ ಇವರ ರಕ್ತದ ಮಾದರಿಯನ್ನು ಬಾಬು ಸಂಖ್ಯೆ.5ರಲ್ಲಿ ಕಳುಹಿಸಿದ್ದು, – ಇವುಗಳು ಮೃತ ಮಗುವಿನಿಂದ ಪಡೆದ ಅಂಗಗಳೊಂದಿಗೆ ಸಂಗತವಾಗಿರುತ್ತವೆ.*

ಆದ್ದರಿಂದ, ನಾನು, ಬಾಬು ಸಂಖ್ಯೆ.1 ಹಾಗೂ 2 ರಲ್ಲಿ ಯಾರ ಯಕೃತ್ತು ಹಾಗೂ ಮಾಂಸಖಂಡಗಳನ್ನು ಕಳುಹಿಸಿರುತ್ತಾರೋ, ಅವುಗಳಿಗೂ, ಶ್ರೀ ಶೇಖರ್ ವಿ. ಹರಿಕಾಂತ್ ಬಿನ್ ಶ್ರೀ ವಿಷ್ಣು ಹರಿಕಾಂತ್ ರವರ ರಕ್ತದ ಮಾದರಿಯನ್ನು ಬಾಬು ಸಂಖ್ಯೆ.4ರಲ್ಲಿಯೂ ಹಾಗು ಶ್ರೀಮತಿ ನಾಗರತ್ನ ಕೋಂ ಶ್ರೀ ಶೇಖರ್ ವಿ. ಹರಿಕಾಂತ್ ಇವರ ರಕ್ತದ ಮಾದರಿಯನ್ನು ಬಾಬು ಸಂಖ್ಯೆ.5ರಲ್ಲಿ ಕಳುಹಿಸಿದ್ದು,

ರಕ್ತದ ಮಾದರಿಯೊಂದಿಗೆ ಸಂಗತವಾಗಿರುವುದರಿಂದ ಪ್ರಸ್ತಾಪಿತ ಮಗುವು, ಸದರಿಯವರ ಮಗು ಹಾಗೂ ಪ್ರಜನನ ಮಗುವೆಂದೇ ನಾನು ಅಭಿಪ್ರಾಯಪಟ್ಟಿರುತ್ತೇನೆ.

ಮೇಲಿನ ತೀರ್ಮಾನದಿಂದ, ಯಾವ ಮಗುವಿನ ಯಕೃತ್ತು ಹಾಗೂ ಮಾಂಸಖಂಡವನ್ನು ಬಾಬು ಸಂ.1 ಹಾಗೂ 2 ಗಳಲ್ಲಿ ಪರೀಕ್ಷೆಗಾಗಿ ಕಳುಹಿಸಲಾಯಿತೋ ಅವುಗಳು ಶ್ರೀ ಶೇಖರ್ ವಿ. ಹರಿಕಾಂತ್ ಹಾಗೂ ಶ್ರೀಮತಿ ನಾಗರತ್ನ (ಬಾಬು ಸಂ.4 ಹಾಗೂ 5ರಲ್ಲಿ ಕಳುಹಿಸಲಾದ ರಕ್ತದ ಮಾದರಿಗಳ ಮೇರೆಗೆ ರವರುಗಳ ಮಗು ಹಾಗೂ ಪ್ರಜನನ ಮಗುವೆಂಬುದು ಸ್ಪಷ್ಟವಾಗಿರುತ್ತದೆ. ವೈಜ್ಞಾನಿಕ ಅಧಿಕಾರಿಯ ಮೇಲೆ ಪ್ರಸ್ತಾಪಿಸಿದ ತೀರ್ಮಾನ ಹಾಗೂ ನಿಶಾನೆ ಪಿ.35ರಲ್ಲಿನ ವರದಿಯು ಮಗುವು ಆಪಾದಿತರಿಗೆ ಜನಿಸಿರುತ್ತದೆಂಬ ಪ್ರಾಸಿಕ್ಯೂಷನ್‌ನ ವಾದವನ್ನು ಸಂಪೂರ್ಣವಾಗಿ ರುಜುವಾತು ಪಡಿಸಿರುತ್ತದೆ. ಮೇಲೆ ಪ್ರಸ್ತಾಪಿಸಿದ, ವಿಷಯದ ಆಯಾಮದ ಮೇಲೆ ಯಾವುದೇ ಗಂಭೀರ ವಿಚಾರಣೆ ನಡೆದಿರುವುದಿಲ್ಲ.

15. ಆದಾಗ್ಯೂ, ಕುಕ್ಕೆ ಸುಬ್ರಮಣ್ಯದಲ್ಲಿ ತಾವು ಮಗುವನ್ನು ಬಿಟ್ಟು ಬಂದೆವೆಂದೂ ಆದರೆ ಮೃತ ಮಗುವಿನ ಕೊಲೆಗೆ ತಾವು ಕಾರಣರಲ್ಲವೆಂಬುದು ಆಪಾದಿತರ ವಾದವಾಗಿರುತ್ತದೆ.

ನಾವು ಒಪ್ಪಿಕೊಂಡ ಮೇಲೆ ನಮೂದಿಸಿದ ಕಾರಣಗಳಿಂದ ಪ್ರಾಸಿಕ್ಯೂಷನ್‌ನಿಂದ ಉದಾಹರಿಸಲಾದ ಎಲ್ಲಾ ಸಂದರ್ಭಗಳನ್ನು ಅದು ಯುಕ್ತ ಸಂದೇಹವನ್ನು ಮೀರಿ ರುಜುವಾತು ಪಡಿಸಿರುತ್ತವೆಂಬುದು ಸ್ಪಷ್ಟವಾಗಿರುತ್ತದೆ. ರುಜುವಾತುಪಡಿಸಿದ ಸಂದರ್ಭಗಳಿಂದ ಅಪಾದಿತರು ದಿನಾಂಕ 31.3.2011 ರಂದು ಕುಕ್ಕೆ ಸುಬ್ರಮಣ್ಯಕ್ಕೆ ಬಂದಿದ್ದರೆಂಬುದು ಸ್ಪಷ್ಟವಾಗಿರುತ್ತದೆ; ಮೃತ ಮಗುವು ಅವರಿಗೆ ಜನಿಸಿದ ಮಗುವಾಗಿರುತ್ತದೆ; ಆ ದಿನ ಮಗುವನ್ನು ಎತ್ತಿಕೊಂಡು ಬಂದಿರುತ್ತಾರೆ ಹಾಗೂ ಬೆಂಗಳೂರು ಏರ್ ಪೋರ್ಸ್ ಕಮಾಂಡ್ ಆಸ್ಪತ್ರೆಯಿಂದ ಆಗ ಆ ಮಗುವಿಗೆ 25 ದಿನಗಳಾಗಿರುತ್ತದೆ. ನೀಡಿರುವ ಜನನ ಪ್ರಮಾಣ ಪತ್ರದಿಂದ ಸ್ಪಷ್ಟವಾಗಿರುವಂತೆ ಮಗುವು ಕುಕ್ಕೆ ಸುಬ್ರಹಣ್ಯದಲ್ಲಿ ಮೃತಪಟ್ಟ

ಸಮಯದಲ್ಲಿ ಆಪಾದಿತ ಸಂಖ್ಯೆ.1 ಹಾಗೂ 2ರ ಬಳಿಯಲ್ಲೇ ಇದ್ದುದರಿಂದಾಗಿ, ಸಹಜವಾಗಿಯೆ, ಆ ಮಗುವಿನ ತಂದೆ–ತಾಯಿಯರು (ಅಂದರೆ ಆಪಾದಿತರು) ಮಾತ್ರವೇ ಆ ಮಗುವಿನ ಬಗ್ಗೆ ತಿಳಿದುಕೊಂಡಿದ್ದು, ಅವರು ಮಾತ್ರವೇ ವಿವರಿಸಬೇಕಾಗಿದ್ದು, ಬೇರೆಯವರ್‍ಯಾರು ವಿವರಿಸಲಾಗುವುದಿಲ್ಲ. ಮಗುವನ್ನು ಬೇರೆಯವರು ಕದ್ದು / ಅಪಹರಿಸಿ ಕೊಲೆ ಮಾಡಿದ್ದಾರೆ ಎಂಬುದು ಆಪಾದಿತರ ವಾದವಾಗಿರುವುದಿಲ್ಲ. ಆಪಾದಿತರಿಂದ ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳಡಿಯಲ್ಲಿ ಯುಕ್ತ ವಿವರಣೆಯನ್ನು ನಿರೀಕ್ಷಿಸುವುದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 313 ನೇ ಪ್ರಕರಣದಡಿಯಲ್ಲಿ ಆಪಾದಿತರ ಹೇಳಿಕೆಯನ್ನು ದಾಖಲಿಸಿಕೊಳ್ಳುವ ಹಂತದಲ್ಲಿ ಅವರ ಲಿಖಿತ ಹೇಳಿಕೆಗಳನ್ನು ಸಲ್ಲಿಸುವ ಮೂಲಕ ಮಗುವಿನ ಮರಣವು ಹೇಗೆ ಸಂಭವಿಸಿತು ಎಂಬುದನ್ನು ವಿವರಿಸಬೇಕಾಗಿರುತ್ತದೆ. ಸಾಕ್ಷ್ಯವು ಆಪಾದಿತರ ಪರವಾಗಿ ಇರುವುದಿಲ್ಲವೆಂಬುದನ್ನು ಇಲ್ಲಿಯೇ ಸ್ಪಷ್ಟಪಡಿಸಿ ಬಿಡಬೇಕು. ಆದಾಗ್ಯೂ, ಅವರು ನ್ಯಾಯಾಲಯದ ಎದುರು ಲಿಖಿತ ಹೇಳಿಕೆಗಳನ್ನು ಸಲ್ಲಿಸುವ ಮೂಲಕ ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ಅವರು ತಮ್ಮ ವಿವರಣೆಯನ್ನು ನೀಡಿರುತ್ತಾರೆ. ಸದರಿ ಹೇಳಿಕೆಯು ಈ ಮುಂದಿನಂತಿರುತ್ತದೆ.

> *"ನಾನು ಮತ್ತು ಎರಡನೇಯ ಆರೋಪಿ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದು, ನಮ್ಮ ಮದುವೆಗೆ ಮನೆಯವರ ವಿರೋಧವಿತ್ತು. ನಾನು ಬೆಂಗಳೂರಿನಲ್ಲಿ ಭೂಸೇನೆಯಲ್ಲಿ ನೌಕರಿಯಲ್ಲಿದ್ದು, ರಜೆ ಸಿಕ್ಕಿದಾಗಲೆಲ್ಲಾ ಊರಿಗೆ ಬರುತ್ತಿದ್ದೆ. ಹೀಗೆ ಊರಿಗೆ ಬಂದಾಗ ನಾನು ಮತ್ತು ಎರಡನೆಯ ಆರೋಪಿ ಅನ್ಯೋನ್ಯತೆಯಿಂದ ಇದ್ದು, ನಮ್ಮೊಳಗೆ ದೈಹಿಕ ಸಂಪರ್ಕವೂ ಇತ್ತು. ಪರಿಣಾಮ ಎರಡನೆಯ ಆರೋಪಿಯು ಗರ್ಭವತಿಯಾದ ವಿಷಯ ಅವಳಿಂದ ನನಗೆ ದೂರವಾಣಿ ಮೂಲಕ ತಿಳಿಯಿತು. ಮನೆಯವರಿಗೆ ವಿಷಯ ತಿಳಿದರೆ ತುಂಬಾ ಕಷ್ಟ ಎಂದು ನಾವು ಕಾನೂನುಬದ್ಧರಾಗಿ ಸತಿಪತಿಯರಾದೆವು. ನಾನು, ನನ್ನ ಪತ್ನಿ ಎರಡನೆಯ ಆರೋಪಿಗೆ ಬೆಂಗಳೂರಿನಲ್ಲಿ*

*ಬಾಡಿಗೆ ಮನೆಯನ್ನು ಸಹ ಮಾಡಿಕೊಟ್ಟು, ನಾವಿಬ್ಬರೂ ಒಟ್ಟಿಗೇ ಜೀವಿಸುತ್ತಿದ್ದೆವು. ನಂತರ ಎರಡನೆಯ ಆರೋಪಿಯು ನಮ್ಮ ಮಿಲಿಟರಿ ಆಸ್ಪತ್ರೆಯಲ್ಲಿ ಒಂದು ಹೆಣ್ಣು ಮಗುವಿಗೆ ಜನ್ಮ ಕೊಟ್ಟಳು.*

*ಎರಡನೆಯ ಆರೋಪಿಯು ಮನೆಯುವರಿಗೆ ತಿಳಿಸದೇ ಬೆಂಗಳೂರಿಗೆ ಬಂದುದರಿಂದ, ನಾವು ರಜೆ ಮಾಡಿ ಊರಿಗೆ ಹೋಗಲು ನಿರ್ಣಯಿಸಿದೆವು. ಆದರೆ ಎರಡನೇ ಆರೋಪಿ ಮದುವೆಯ ಮುಂಚೆ ಗರ್ಭವತಿಯಾದುದರಿಂದ ಮನೆಯವರು ಮಗುವಿನೊಂದಿಗೆ ನಮ್ಮನ್ನು ಮನೆಗೆ ಸೇರಿಸಲಾರರು ಎಂಬ ಭಯದಿಂದ ನಾವು ಬೆಂಗಳೂರಿನಿಂದ ನೇರವಾಗಿ ಕುಕ್ಕೆ ಶ್ರೀ ಸುಬ್ರಮಣ್ಯ ದೇವಸ್ಥಾನಕ್ಕೆ ಹೋದೆವು. ಶ್ರೀ ಸುಬ್ರಮಣ್ಯ ದೇವಸ್ಥಾನಕ್ಕೆ ಮಕ್ಕಳಾಗದವರು ಮಕ್ಕಳನ್ನು ಕರುಣಿಸಲು ದೇವರಿಗೆ ಹರಕೆ ಹಾಕಲು ಸುಬ್ರಮಣ್ಯಕ್ಕೆ ಬರುವ ವಿಚಾರ ನಮಗೆ ತಿಳಿದಿತ್ತು. ಆ ರೀತಿ ಅಲ್ಲಿಗೆ ದೇವಸ್ಥಾನಕ್ಕೆ ಬಂದು ಸ್ನಾನ ಘಟ್ಟದ ಬಳಿ ನಮ್ಮ ಮಗುವನ್ನು ಬಿಟ್ಟು ಯಾರಾದರೂ ಮಕ್ಕಳಿಲ್ಲದ ಭಕ್ತರು ಅನಾಥ ಮಗುವನ್ನು ನೋಡಿ ದೇವರು ಕರುಣಿಸಿದ ಮಗು ಎಂದು ಎತ್ತಿಕೊಂಡು ಹೋಗಿ ಸಲಹಬಹುದು ಎಂಬ ಭಾವನೆಯಿಂದ ಮಗುವನ್ನು ಬಿಟ್ಟು ಅಲ್ಲಿಂದ ತೆರಳಿದೆವು.*

*ಹಾಗೇ ನಾವು ಸುಬ್ರಮಣ್ಯ ಬಸ್ಸು ನಿಲ್ದಾಣದ ಬಳಿ ಸಂಚರಿಸುವಾಗ ಕರ್ತವ್ಯದಲ್ಲಿದ್ದ ಪೊಲೀಸಿನವರೊಬ್ಬರು ನಮ್ಮನ್ನು ಪ್ರಶ್ನಿಸತೊಡಗಿದರು. ನೀವು ಯಾರು? ನಿಮಗೆ ಮದುವೆಯಾಗಿದೆಯೇ? ನೀವು ಯಾವ ಕೋಮಿಗೆ ಸೇರಿದವರು ಎಂದು ವಿಚಾರಿಸಿ ನಮ್ಮನ್ನು ಠಾಣೆಗೆ ಕರೆದೊಯ್ದರು. ಅಲ್ಲಿ ನಾವು ನಮ್ಮ ಮದುವೆಯ ಬಗ್ಗೆ ದಾಖಲೆ ತೋರಿಸಿ ನಮ್ಮ ಗುರುತು ತಿಳಿಸಿದ ನಂತರ ಠಾಣೆಯಿಂದ ಹೋಗಲು ಅನುಮತಿ ಇತ್ತರು. ನಂತರ ಕೆಲವು ದಿನಗಳ ನಂತರ ನಮ್ಮ ಊರಿಗೆ ಪೊಲೀಸರು ಬಂದು ಮನೆಯಿಂದ ನನ್ನನ್ನು ಕರೆದೊಯ್ದು*

*ನಮ್ಮ ಮೇಲೆ ಸುಳ್ಳು ಕೇಸು ದಾಖಲಿಸಿದ್ದಾರೆ. ನಾವು ನಿರಪರಾಧಿಗಳು, ನಾವು ನಮ್ಮ ಮಗುವನ್ನು ಕೊಲೆ ಮಾಡಿಲ್ಲ."*

16. ನ್ಯಾಯಾಲಯದ ಮುಂದೆ ಆಪಾದಿತ ಸಂ.1 ರವರು (ಕನ್ನಡ ಭಾಷೆಯಲ್ಲಿರುವಂಥ) ಸಲ್ಲಿಸಿದ ಮೇಲೆ ನಮೂದಿಸಲಾದ ಹೇಳಿಕೆಯಿಂದ, ಈತ ಆಪಾದಿತ ಸಂ.2ನ್ನು ಆಳವಾಗಿ ಪ್ರೀತಿಸುತ್ತಿದ್ದು, ಅವರ ನಡುವೆ ದೈಹಿಕ ಸಂಪರ್ಕವೂ ಇತ್ತು. ತತ್ಪರಿಣಾಮವಾಗಿ ಆಪಾದಿತ ಸಂ.1 ಗರ್ಭಿಣಿಯಾಗಿರುತ್ತಾಳೆ. ಆಪಾದಿತ ಸಂ.2 ತಾನು ಗರ್ಭಿಣಿಯಾಗಿರುವ ಬಗ್ಗೆ ತನ್ನ ತಂದೆ–ತಾಯಿಯರಿಗೆ ಹಾಗೂ ತನ್ನ ಗ್ರಾಮದ ಗ್ರಾಮಸ್ಥರಿಗೆ ತಿಳಿಸಲು ಹೆದರುತ್ತಾಳೆ. ಆದರೆ, ಆ ಕಾಲಾವಧಿಯಲ್ಲಿ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಂಥ ಆಪಾದಿತ ಸಂ.1 ಈತನಿಗೆ ವಿಷಯವನ್ನು ತಿಳಿಸಿರುತ್ತಾಳೆ; ಆಪಾದಿತ ಸಂ.1, ಆಪಾದಿತ ಸಂ.2ನ್ನು ಬೆಂಗಳೂರಿಗೆ ಬರಲು ಕೋರಿಕೊಳ್ಳುತ್ತಾನೆ. ಆಪಾದಿತ ಸಂ.2 ಬೆಂಗಳೂರಿಗೆ ಬಂದ ತರುವಾಯ, ಆಪಾದಿತರಿಬ್ಬರು ಕಾನೂನಿನ ಪ್ರಕಾರ ವಿವಾಹವಾಗಿ, ಬೆಂಗಳೂರಿನಲ್ಲಿ ಒಂದು ಬಾಡಿಗೆ ಮನೆ ಪಡೆದು ಪತಿ–ಪತ್ನಿಯರಾಗಿ ಜೀವನ ಮಾಡಲು ಆರಂಭಿಸುತ್ತಾರೆ; ನಂತರ ಬೆಂಗಳೂರಿನ ಏರ್ ಫೋರ್ಸ್ ಕಂಮಾಂಡ್ ಆಸ್ಪತ್ರೆಯಲ್ಲಿ ಆಪಾದಿತ ಸಂ.2 ಈಕೆಗೆ ಒಂದು ಹೆಣ್ಣು ಮಗು ಜನಿಸಿರುತ್ತದೆ; ಆಪಾದಿತರಿಬ್ಬರೂ ತಮ್ಮ ಗ್ರಾಮದ ಗ್ರಾಮಸ್ಥರು ಹಾಗೂ ತಮ್ಮ ತಂದೆ–ತಾಯಿಯರುಗಳು, ವಿವಾಹಕ್ಕೆ ಮೊದಲೇ ಆಪಾದಿತ ಸಂಖ್ಯೆ.2 ಗರ್ಭಿಣಿಯಾಗಿರುವ ವರ್ತನೆಯನ್ನು ಸಹಿಸುವುದಿಲ್ಲ ಎಂದು ಯೋಚಿಸಿ, ತಮ್ಮ ಜೀವನ ಹಾಗೂ ಜೀವಗಳ ಬಗ್ಗೆ ಹೆದರಿ, ಕುಕ್ಕೆ ಸುಬ್ರಮಣ್ಯ ದೇವಾಲಯಕ್ಕೆ ಮಗುವನ್ನು ಬಿಟ್ಟು ಬರಲು ಬರುತ್ತಾರೆ; ಮಕ್ಕಳಾಗದ ವಿವಾಹಿತ ದಂಪತಿಗಳು ಮಕ್ಕಳನ್ನು ಕರುಣಿಸೆಂದು ಹರಕೆ ಹೊತ್ತು ಕುಕ್ಕೆ ಸುಬ್ರಮಣ್ಯ ದೇವಾಲಯಕ್ಕೆ ಬರುತ್ತಾರೆಂಬ ವಿಷಯವನ್ನು ಅರಿತಿದ್ದರಿಂದ, ತಮ್ಮ ಮಗುವನ್ನು ಮಕ್ಕಳಿಲ್ಲದವರು ತಮ್ಮೊಂದಿಗೆ ಈ ಮಗುವನ್ನು ಎತ್ತಿಕೊಂಡು ಹೋಗಿ ಸಾಕಿಕೊಳ್ಳುತ್ತಾರೆಂಬುದನ್ನು ಹಾಗೂ ಈ ಮಗುವನ್ನು ತಮಗೆ ಕುಕ್ಕೆ ಸುಬ್ರಮಣ್ಯನೇ ಕರುಣಿಸಿದ್ದನೆಂದು ಭಾವಿಸುತ್ತಾರೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಮಗುವನ್ನು ಬಿಟ್ಟು ತೆರಳಲು ಇದೇ ಸರಿಯಾದ ಸ್ಥಳವೆಂದು ನಿರ್ಧರಿಸುತ್ತಾರೆ. ಹಾಗೆ ಯೋಚಿಸಿ

ಹೆಚ್ಚಿನ ಜನರು ಸ್ನಾನ ಮಾಡಿಕೊಳ್ಳುತ್ತಿದ್ದ ನದಿಯ ದಡದ ಬಳಿ ಮಗುವನ್ನು ಬಿಟ್ಟು ತೆರಳುತ್ತಾರೆಂಬುದು ಸ್ಪಷ್ಟವಾಗಿರುತ್ತದೆ. ಮುಂದುವರೆದು, ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿನ ತಮ್ಮ ಹೇಳಿಕೆಯಲ್ಲಿ ಆಪಾದಿತ ಸಂ.1 ಅವರು ಬಸ್ಸು ನಿಲ್ದಾಣದಲ್ಲಿದ್ದಾಗ, ಪೊಲೀಸರು ತಮ್ಮನ್ನು ಪರಿಪ್ರಶ್ನಿಸಿಲು ಆರಂಭಿಸಿದರು, ಅಂತಿಮವಾಗಿ, ಆರಕ್ಷಕ ಠಾಣೆಯಲ್ಲಿ ತಾವು ತಮ್ಮ ವಿವಾಹ ಪ್ರಮಾಣ ಪತ್ರವನ್ನು ಹಾಗೂ ಮಿಲಿಟರಿಯವರು ನೀಡಿರುವ ಗುರುತಿನ ಚೀಟಿಯನ್ನು ತೋರಿಸಿದೆವು, ನಂತರ ಪೊಲೀಸರು ತಮ್ಮ ಕಳುಹಿಸಿದರು ಎಂದು ಹೇಳಿರುತ್ತಾರೆ. ಈ ವಿವರಣೆಯನ್ನು ಆಧರಿಸಿ, ಆಪಾದಿತರು ಮೃತ ಮಗುವಿನ ಕೊಲೆಯನ್ನು ತಾವು ಮಾಡಿರುವುದಿಲ್ಲ; ಮಗುವಿನ ಪ್ರಾಣವನ್ನು ಉಳಿಸಲು ತಾವು ಪ್ರಯತ್ನಿಸಿದೆವು ಎಂದು ವಾದಿಸಿರುತ್ತಾರೆ.

17. ನಮ್ಮ ಪರಿಗಣಿತ ಅಭಿಪ್ರಾಯದಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ಹೇಳಿಕೆಯನ್ನು ದಾಖಲಿಸುವ ಹಂತದಲ್ಲಿ ಆಪಾದಿತರು ಈ ನ್ಯಾಯಾಲಯದ ಮುಂದೆ ಸಲ್ಲಿಸಿರುವ ಲಿಖಿತ ಹೇಳಿಕೆಯು ಪ್ರಾಸಿಕ್ಯೂಷನ್ ವಾದವನ್ನು ಬೆಂಬಲಿಸುತ್ತದೆ ಹಾಗೂ ಎಲ್ಲಾ ವಸ್ತುನಿಷ್ಠ ಆಯಾಮಗಳಲ್ಲಿಯೂ ಈ ವಾದವನ್ನು ಸಮರ್ಥಿಸುತ್ತದೆ.

ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ದಾಖಲಿಸಿದ ಆಪಾದಿತರ ಸಂ.1ರ ಹೇಳಿಕೆಯನ್ನು ಪ್ರತಿವಾದ ಸಲ್ಲಿಸುವ ವಕೀಲರ ವಾದದಂತೆ ಮಾತ್ರ ರೂಪಿಸಲಾಗಿದೆಯೆಂಬ ವಾಸ್ತವಾಂಶದ ಬಗ್ಗೆ ನೀವು ಪ್ರಜ್ಞಾ ಪೂರ್ವಕವಾಗಿದ್ದೇವೆ. ಆದಾಗ್ಯೂ, ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ಆಪಾದಿತರು ಪ್ರತಿವಾದದಲ್ಲಿ ಸಲ್ಲಿಸಿದಂಥ ಹೇಳಿಕೆಯನ್ನು ಪ್ರಾಸಿಕ್ಯೂಷನ್ ಸಲ್ಲಿಸಿದ ಸಾಕ್ಷ್ಯವನ್ನು ನಂಬಲು ಸಹಾಯಕವಾಗುವಂತೆ ಪರಿಗಣಿಸಬೇಕಾಗುತ್ತದೆ. ಆದರೆ ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿನ ಅಂಥ ಹೇಳಿಕೆಯ ಭಾಗವನ್ನು ಮಾತ್ರ ಆತನ ಅಪರಾಧ ನಿರ್ಣಯದ ಏಕ ಮಾತ್ರ ಆಧಾರವಾಗಿ ರೂಪಿಸಲಾಗುವುದಿಲ್ಲ. ಈ ವಿಷಯ

ಕುರಿತಾದ ಕಾನೂನು, ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿನ ಆಪಾದಿತರ ಹೇಳಿಕೆಯನ್ನು ಸಂಪೂರ್ಣವಾಗಿಯಾಗಲೀ ಅಥವಾ ಭಾಗಶ:ವಾಗಿಯಾಗಲೀ ನಂಬಬಹುದೆಂಬ ಅಭಿಪ್ರಾಯದೊಂದಿಗೆ ಬಹುತೇಕ ಇತ್ಯರ್ಥಗೊಂಡಿರುತ್ತದೆ. ***ನಿಶಿ ಕಾಂತ್ ಝು –ವಿರುದ್ಧ– ಬಿಹಾರ ಸರ್ಕಾರ***[1] ಹಾಗೂ ***ಮೋಹನ್ ಸಿಂಗ್ –ವಿರುದ್ಧ– ಪ್ರೇಮ್ ಸಿಂಗ್ ಮತ್ತು ಮತ್ತೊಬ್ಬರು***[2] ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ನಿರಪರಾಧಿಯೆಂದು ನಿರ್ಣಯಿಸುವ ಅಂಶವು ಪ್ರಾಸಿಕ್ಯೂಷನ್ ನೀಡಿದ ಸಾಕ್ಷ್ಯದ ಆಧಾರದ ಮೇಲೆ ಸುಳ್ಳೆಂದು ಕಂಡು ಬಂದಲ್ಲಿ, ಆಪಾದಿತರ ಹೇಳಿಕೆಯ ಆರೋಪ ಸಾಬೀತು ಪಡಿಸುವ ಅಂಶವನ್ನು ಅವಲಂಭಿಸುವ ಸಾಧ್ಯತೆ ಇರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.

ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ಆತನು ಹೇಳಿಕೆ ನೀಡುವ ಸಮಯದಲ್ಲಿ ತಪ್ಪು ಮಾಹಿತಿ ನೀಡಿದಲ್ಲಿ ನ್ಯಾಯಾಲಯವು ಆತನ ವಿರುದ್ಧ ಪ್ರತಿಕೂಲ ಊಹೆಯನ್ನು ಮಾಡಬಹುದಾಗಿರುತ್ತದೆಂಬುದು ಇತ್ಯರ್ಥಗೊಂಡ ಕಾನೂನಾಗಿರುತ್ತದೆ. ಆದಾಗ್ಯೂ, ಪ್ರಸ್ತುತ ಪ್ರಕರಣದಲ್ಲಿ, ಆಪಾದಿತನು ಸರಿಯಿಲ್ಲದ ಹಾಗು ಸುಳ್ಳು ಮಾಹಿತಿ ನೀಡದಿರುವುದು ಕಂಡು ಬಂದಿದ್ದು, ವಿವರಣೆಯು ನ್ಯಾಯಯುಕ್ತವು, ನಂಬಲರ್ಹವೆಂದು ಕಂಡು ಬಂದಿರುವುದರಿಂದ ಒಪ್ಪಿಕೊಳ್ಳಬಹುದಾಗಿರುತ್ತದೆ. ಆಪಾದಿತನ ಹೇಳಿಕೆಯು ಪ್ರಾಸಿಕ್ಯೂಷನ್‌ನ ವಾದವನ್ನು ಸಂಪೂರ್ಣವಾಗಿ ಬೆಂಬಲಿಸುವುದರಿಂದ ಹಾಗೂ ಸಮರ್ಥಿಸುವುದರಿಂದ ಮಾತ್ರದಿಂದಲೇ ಇದು, ಆಪಾದಿತರ ಅಪರಾಧ ನಿರ್ಣಯಕ್ಕೆ ಸಂಬಂಧಿಸಿದ ಏಕ ಮಾತ್ರ ಆಧಾರವಾಗಿರುವುದಿಲ್ಲ. ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿನ ಆಪಾದಿತರ ಹೇಳಿಕೆಯನ್ನು ಪ್ರಾಸಿಕ್ಯೂಷನ್ ವಾದದ ನಿಜಾಂಶವನ್ನು ತಿಳಿಸಲು ಅಥವಾ ಅನ್ಯಥಾ ಪರಿಗಣನೆಗೆ ತೆಗೆದುಕೊಳ್ಳಬಹುದಾಗಿರುತ್ತದೆ. ಅಂಥ ಹೇಳಿಕೆಯನ್ನು ಪ್ರಮಾಣ ಮಾಡಿಸಿದ ತರುವಾಯ ದಾಖಲಿಸದಿರುವುದರಿಂದ ಹಾಗೂ ಆಪಾದಿತರನ್ನು ಪಾಟೀ ಸವಾಲು ಮಾಡದಿರುವುದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 313ನೇ

1. 1969 ಎಐಆರ್ 422    2. ಎಐಆರ್ 2002 ಎಸ್‌ಸಿ 3582

ಪ್ರಕರಣದಡಿಯಲ್ಲಿ ಹಾಗೆ ದಾಖಲಿಸಿದ ಈತನ ಹೇಳಿಕೆಯನ್ನು ಸಾಕ್ಷ್ಯ ಅಧಿನಿಯಮ, 1872ರ 3ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗಿನ ಸಾಕ್ಷ್ಯದಂತೆ ಪರಿಗಣಿಸಬೇಕಾಗಿರುವುದಿಲ್ಲ. ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ಆಪಾದಿತರ ಹೇಳಿಕೆಯನ್ನು ಸಾಕ್ಷ್ಯ ಅಧಿನಿಯಮ, 1872ರ 3ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸಾಕ್ಷ್ಯವೆಂದು ಪರಿಗಣಿಸದಿದ್ದಾಗ್ಯೂ, ಪ್ರಾಸಿಕ್ಯೂಷನ್ ವಾದದ ನಿಜಾಂಶವನ್ನು ತಿಳಿಸಲು ಅಥವಾ ಅನ್ಯಥಾ ಪರಿಗಣನೆಗೆ ತೆಗೆದುಕೊಳ್ಳಬಹುದಾಗಿರುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ದಾಖಲಿಸಿಕೊಂಡ ಆಪಾದಿತರ ಹೇಳಿಕೆಯು ಪ್ರಾಸಿಕ್ಯೂಷನ್‌ನ ವಾದವನ್ನು ಬೆಂಬಲಿಸಿದಲ್ಲಿ, ಇದು ಖಂಡಿತವಾಗಿ, ತನಿಖೆ ಮಾಡಲು, ನಿರ್ದಿಷ್ಟವಾಗಿ, ಪ್ರಾಸಿಕ್ಯೂಷನ್ ಘಟನೆಗಳ ಸರಣಿಯನ್ನು ಸುಸ್ಥಾಪಿಸಲು ಸಮರ್ಥವಾಗದಿದ್ದಾಗ, ನ್ಯಾಯಾಲಯಕ್ಕೆ ಸೂಕ್ತ ಪರಿಗಣನೆಯಾಗಬಹುದಾಗಿರುತ್ತದೆ. ಪ್ರಾಸಿಕ್ಯೂಷನ್ ಉದಾಹರಿಸಿದ ಸಂದರ್ಭಗಳು ಯುಕ್ತ ಸಂದೇಹವನ್ನು ಮೀರಿ ರುಜುವಾತಾಗಿವೆಯೆಂದು ಹಾಗೂ ತತ್ಪರಿಣಾಮವಾಗಿ ಸಂದರ್ಭಗಳ ಸರಣಿಯು ಪೂರ್ಣಗೊಳ್ಳುವುದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ಆಪಾದಿತರ ಹೇಳಿಕೆಯು ಪರಿಗಣಿಸಲು ಈ ನ್ಯಾಯಾಲಯಕ್ಕೆ ಸಂಬಂಧಿಸಿದ ಹೆಚ್ಚುವರಿ ಹಾಗೂ ಸೂಕ್ತ ಪರಿಗಣನೆಯಾಗಿರುತ್ತದೆ.

18. ಆಪಾದಿತ ಸಂ.1ರ ಹೇಳಿಕೆಯನ್ನು ಸಹ–ಆಪಾದಿತರ ಹೇಳಿಕೆಯಂತೆ ಪರಿಗಣಿಸಬೇಕಾಗಿಲ್ಲವೆಂಬ ವಾಸ್ತವಾಂಶದ ಬಗ್ಗೆ ನಾವು ಪ್ರಜ್ಞಾಪೂರ್ವಕವಾಗಿರಬೇಕಾಗಿರುತ್ತದೆ. ಆದಾಗ್ಯೂ, ಸಾಕ್ಷ್ಯ ಅಧಿನಿಯಮ, 1872ರ ಪ್ರಕರಣದಡಿಯಲ್ಲಿನ ಹೇಳಿಕೆಯನ್ನು, ಆಪಾದಿತರಿಬ್ಬರೂ ಅಪರಾಧ ಎಸಗಲು ಸ್ಪಷ್ಟ ಹಾಗೂ ಜಂಟಿ ಉದ್ದೇಶವನ್ನು ಹೊಂದಿದ್ದರೆಂದು ಹಾಗೂ ಅಪರಾಧ ಎಸಗಲು ಅವರಿಬ್ಬರೂ ಪಿತೂರಿ ನಡೆಸಿದರೆಂದು ನ್ಯಾಯಾಲಯಕ್ಕೆ ಮನವರಿಕೆಯಾದರೆ ಸಹ–ಆಪಾದಿತನ ಹೇಳಿಕೆಯೆಂದೂ ಪರಿಗಣಿಸಬಹುದು. ಪ್ರಸ್ತುತ ವಿಷಯದಲ್ಲಿ, ಪಿತೂರಿಯ ಆರೋಪ ಇರುವುದಿಲ್ಲ. ಆದಾಗ್ಯೂ ದಾಖಲೆ ಮೇಲಿರುವ ಸಾಕ್ಷ್ಯವು, ಆಪಾದಿತರಿಬ್ಬರು ಪ್ರಶ್ನಿತ ಕೃತ್ಯವನ್ನು ಎಸಗುವ ಸಮಾನ ಉದ್ದೇಶವನ್ನು

ಹೊಂದಿದ್ದರೆಂಬುದನ್ನು ಬಹಿರಂಗಪಡಿಸುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ದಾಖಲಿಸಿಕೊಂಡ ಆಕೆಯ ಹೇಳಿಕೆಯಲ್ಲಿ ಕೂಡ, ಆಪಾದಿತ ಸಂ.2, ಮಗುವಿನ ಹುಟ್ಟಿಗೆ ಸಂಬಂಧಿಸಿದಂತೆ, ಆಕೆ ಗರ್ಭಿಣಿಯಾಗಿದ್ದಾಗ ಆಕೆಗೆ ಆಪಾದಿತ ಸಂ.1 ಈತನೊಂದಿಗೆ ಮದುವೆಯಾದ ಬಗ್ಗೆ ಹಾಗೂ ತನಿಖೆ ಮುಂತಾದವುಗಳಿಗೆ ಸಂಬಂಧಿಸಿದಂತೆ ಆಕೆಯಿಂದ ರಕ್ತವನ್ನು ತೆಗೆದುಕೊಳ್ಳುವಾಗ ಆಕೆಗೆ ವಿರುದ್ಧವಾಗಿನ ಅಪರಾಧಗಳಲ್ಲಿ ಸಿಕ್ಕಿಸಿಹಾಕುವ ಸಾಕ್ಷ್ಯವನ್ನು ನಿರಾಕರಿಸಿರುವುದಿಲ್ಲ.

19. ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು, ನಾವು ಪ್ರಾಸಿಕ್ಯೂಷನ್ ಯುಕ್ತ ಸಂದೇಹವನ್ನು ಮೀರಿ ತನ್ನ ವಾದವನ್ನು ರುಜುವಾತುಪಡಿಸಿದೆಯೆಂದು ಅಭಿಪ್ರಾಯಪಟ್ಟಿರುತ್ತೇವೆ; ಅದೂ ಅಲ್ಲದೆ ಯುಕ್ತ ಸಂದೇಹವನ್ನು ಮೀರಿ ಪ್ರಾಸಿಕ್ಯೂಷನ್ ರುಜುವಾತು ಪಡಿಸಿದ ಎಲ್ಲಾ ಸಂದರ್ಭಗಳು, ಆಪಾದಿತರು ಕಾನೂನಿನ ಕುಣಿಕೆಯಿಂದ ಯಾವುದೇ ರೀತಿ ತಪ್ಪಿಸಿಕೊಳ್ಳದಂಥ ಸಂದರ್ಭಗಳ ಸಂಪೂರ್ಣ ಸರಣಿಯನ್ನು ರೂಪಿಸಿವೆ. ಅದೂ ಅಲ್ಲದೆ, ಪ್ರಾಸಿಕ್ಯೂಷನ್ ವಾದವು, ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದಡಿಯಲ್ಲಿ ದಾಖಲಾದ ಆಪಾದಿತ ಸಂ.1ರ ಹೇಳಿಕೆಯಿಂದ ಬೆಂಬಲಿತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ನಾವು, ಆಪಾದಿತರು ಕನಿಷ್ಟ ಭಾರತ ದಂಡ ಸಂಹಿತೆಯ 317ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿದ್ದಾರೆಂಬ ತೀರ್ಮಾನಕ್ಕೆ ಬಂದಿರುತ್ತೇವೆ.

ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳಿಂದ ಹಾಗೂ ಮೇಲಿನ ಚರ್ಚೆಯಿಂದ, ಮಗುವಿನ ತಂದೆ–ತಾಯಿಯಿಬ್ಬರೂ ಅಂದರೆ ಇಲ್ಲಿನ ಆಪಾದಿತರು, ಸದರಿ ಮಗುವನ್ನು ತ್ಯಜಿಸುವ ಉದ್ದೇಶದೊಂದಿಗೆ ಸಾರ್ವಜನಿಕ ಸ್ಥಳದಲ್ಲಿ ಮಗುವನ್ನು ಬಿಟ್ಟು ತೆರಳಿದ್ದಾರೆಂಬ ನಿಶ್ಚಿತ ಉದ್ದೇಶ ನಮ್ಮದಾಗಿರುತ್ತದೆ. ಅಲ್ಲದೆ, ನಾವು, ಮಗು ಇಂಥ ತ್ಯಜಿಸುವಿಕೆಯಿಂದಾಗಿಯೋ ಮೃತವಾಗಿರುತ್ತದೆಂಬ ತೀರ್ಮಾನಕ್ಕೆ

ಬಂದಿರುತ್ತೇವೆ. ಅಧಿವಿಚಾರಣಾ ನ್ಯಾಯಾಲಯವು ತನ್ನ ತೀರ್ಪಿನ 26ನೇ ಪ್ಯಾರಾದಲ್ಲಿ ಈ ಪ್ರಕರಣದ ವಾಸ್ತವಾಂಶಗಳಿಗೆ ಭಾರತ ದಂಡ ಸಂಹಿತೆಯ 317ನೇ ಪ್ರಕರಣದ ಅನ್ವಯಕ್ಕೆ ಸಂಬಂಧಿಸಿದಂತೆ ಅಭಿಪ್ರಾಯಪಟ್ಟಿದ್ದಾಗ್ಯೂ, ಭಾರತ ದಂಡ ಸಂಹಿತೆಯ 317ನೇ ಪ್ರಕರಣದಡಿಯಲ್ಲಿ ಆರೋಪವನ್ನು ರೂಪಿಸಿಲ್ಲವೆಂಬ ಸರಳ ಆಧಾರದ ಮೇಲೆ ಮಾತ್ರ ಭಾರತ ದಂಡ ಸಂಹಿತೆಯ 317ನೇ ಪ್ರಕರಣದಡಿಯಲ್ಲಿನ ಅಪರಾಧಕ್ಕೆ ಸಂಬಂಧಿಸಿದಂತೆ ಆಪಾದಿತರ ಅಪರಾಧಗಳನ್ನು ನಿರ್ಣಯಿಸದೆ ದೋಷವೆಸಗಿರುತ್ತದೆ. ಹಾಗೆ ಅಭಿಪ್ರಾಯಪಡುವಾಗ, ಅಧಿವಿಚಾರಣಾ ನ್ಯಾಯಾಲಯವು ಭಾರತ ದಂಡ ಸಂಹಿತೆಯ 317ನೇ ಪ್ರಕರಣದ ವಿವರಣೆಯನ್ನು ಟಿಪ್ಪಣಿ ಮಾಡುವುದನ್ನು ಮರೆತಿರುತ್ತದೆ. ಈ ಹಂತದಲ್ಲಿ, ಭಾರತ ದಂಡ ಸಂಹಿತೆಯ 317 ಪ್ರಕರಣದ ಉಪಬಂಧವನ್ನು ಉದ್ಧರಿಸುವುದು ಸೂಕ್ತವಾಗಿದ್ದು, ಅದು ಈ ಮುಂದಿನಂತಿರುತ್ತದೆ:

> ***317. ತಂದೆ-ತಾಯಿ ಅಥವಾ ಮಗುವಿನ ರಕ್ಷಣೆಯ ಹೊಣೆಯನ್ನು ಹೊತ್ತಿರುವ ವ್ಯಕ್ತಿಯು ಹನ್ನೆರಡು ವರ್ಷಕ್ಕೆ ಕಡಿಮೆ ವಯಸ್ಸಿನ ಮಗುವನ್ನು ಆಪಾಯಕ್ಕೆ ಒಡ್ಡುವುದು ಅಥವಾ ತೊರೆದು ಬಿಡುವುದು.–***
>
> *ಹನ್ನೆರಡು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವಿನ ತಂದೆ ಅಥವಾ ತಾಯಿಯಾಗಿರುವ ಅಥವಾ ಆ ಮಗುವಿನ ರಕ್ಷಣೆಯ ಹೊಣೆ ಹೊತ್ತಿರುವ ವ್ಯಕ್ತಿಯು ಆ ಮಗುವನ್ನು ಅಪಾಯಕ್ಕೊಡ್ಡಿದರೆ ಅಥವಾ ಅದನ್ನು ಸಂಪೂರ್ಣವಾಗಿ ತೊರೆದುಬಿಡುವ ಉದ್ದೇಶದಿಂದ ಯಾವುದೇ ಸ್ಥಳದಲ್ಲಿ ಅದನ್ನು ಬಿಟ್ಟರೆ, ಆ ವ್ಯಕ್ತಿಯು ಏಳು ವರ್ಷಗಳವರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.*
>
> ***ವಿವರಣೆ.–***
>
> *ಹಾಗೆ ಅಪಾಯಕ್ಕೊಡ್ಡಿದ್ದರ ಪರಿಣಾಮವಾಗಿ ಆ ಶಿಶುವು ಮರಣ ಹೊಂದಿದರೆ, ಸಂದರ್ಭಾನುಸಾರ ಕೊಲೆಯ ಅಥವಾ ಅಪರಾಧಿಕ*

*ಮಾನಕ ಹತ್ಯೆಯ ಬಗ್ಗೆ ಅಪರಾಧಿಯ ವಿಚಾರಣೆಯನ್ನು ತಪ್ಪಿಸುವುದು ಈ ಪ್ರಕರಣದ ಉದ್ದೇಶವಾಗಿಲ್ಲ.*

20. ವಿವರಣೆಯೊಂದಿಗಿನ ಭಾರತ ದಂಡ ಸಂಹಿತೆಯ 317ನೇ ಪ್ರಕರಣದ ಏಕರೂಪದ ಓದು, 317ನೇ ಪ್ರಕರಣವು ಹಾಗೆ ಅಪಾಯಕ್ಕೊಡ್ಡಿದ್ದರ ಪರಿಣಾಮವಾಗಿ ಆ ಶಿಶುವು ಮರಣ ಹೊಂದಿದರೆ, ಸಂದರ್ಭಾನುಸಾರ ಕೊಲೆಯ ಅಥವಾ ಅಪರಾಧಿಕ ಮಾನವ ಹತ್ಯೆಯ ಬಗ್ಗೆ ಅಪರಾಧಿಯ ವಿಚಾರಣೆಯನ್ನು ತಪ್ಪಿಸುವುದು ಈ ಪ್ರಕರಣದ ಉದ್ದೇಶವಾಗಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ. ವಿವಾದಾತೀತವಾಗಿ, ಪ್ರಸ್ತುತ ಪ್ರಕರಣದಲ್ಲಿ, ಮಗುವನ್ನು ಸಾರ್ವಜನಿಕ ಸ್ಥಳದಲ್ಲಿ ತೊರೆದ ಕಾರಣಕ್ಕಾಗಿಯೇ ಅದು ಮೃತಪಟ್ಟಿರುತ್ತದೆ. ಘಟನೆ ನಡೆದ ದಿನಾಂಕದಂದು ಆ ಮಗುವಿಗೆ ಕೇವಲ 25 ದಿನಗಳಾಗಿರುತ್ತದೆ. ಪ್ರಾ.ಸಾ.1ರ ಸಾಕ್ಷ್ಯವು, ಮಗುವಿನ ಮೃತ ಶರೀರ / ಶಿಶುವಿನ ಮೃತದೇಹವನ್ನು ಬೀದಿ ನಾಯಿಯ ಆಕೆಯ ಮನೆಯ ಮುಂದೆ ಎಳೆದಾಡುತ್ತಿತ್ತು ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ, ಆ ಕೂಡಲೇ ಆಕೆ ಪ್ರಾ.ಸಾ.13 ರವರಿಗೆ ತಿಳಿಸಿರುತ್ತಾಳೆ. ಆತ ಕೂಡಲೇ ಪೊಲೀಸ್ ಇನ್‌ಪೆಕ್ಟರ್ ರವರಿಗೆ ಮಾಹಿತಿ ತಿಳಿಸಿರುತ್ತಾನೆ. ಪೊಲೀಸರು ಸ್ವಲ್ಪ ಸಮಯದಲ್ಲೇ ಸ್ಥಳಕ್ಕೆ ಧಾವಿಸಿ, ಸದರಿ ಸ್ಥಳದಿಂದ ಮೃತದೇಹವನ್ನು ಅಂದರೆ ಮಹಜರ್ ಮಾಡಿದ ಸ್ಥಳದಿಂದ ಪ್ರಾ.ಸಾ.1ರ ಮನೆಯ ಮುಂದಿನಿಂದ ಎತ್ತಿಕೊಂಡು ಹೋಗಿರುತ್ತಾರೆ. ಇದು, ಡಿಎನ್‌ಎ ಪರೀಕ್ಷೆಗೆ ಸಂಬಂಧಿಸಿದಂತೆ ಶವ ಪರೀಕ್ಷೆಯ ಸಮಯದಲ್ಲಿ ಮಗುವಿನ ಮೂತ್ರಕೋಶ, ಮಾಂಸಖಂಡ ಹಾಗೂ ಮೂಳೆಗಳನ್ನು ಸಂಗ್ರಹಿಸಿದರೆಂಬುದು ಹಾಗೂ ಆಪಾದಿತರ ರಕ್ತದ ಮಾದರಿಗಳೊಂದಿಗೆ ಅವುಗಳನ್ನು ಹೋಲಿಸಿ ನೋಡಿರುತ್ತಾರೆಂಬುದು ಪ್ರಾಸಿಕ್ಯೂಷನ್‌ನಿಂದ ರುಜುವಾತಾಗಿರುತ್ತದೆ. ಡಿಎನ್‌ಎ ಪರೀಕ್ಷೆಯು, ಮೃತ ಮಗುವು ಆಪಾದಿತ ಸಂ.1 ಹಾಗೂ 2 ರವರುಗಳ ಮಗುವೆಂದು ಸ್ಪಷ್ಟವಾಗಿರುತ್ತದೆ.

21. ಇದರೊಂದಿಗೆ, ಕುಕ್ಕೆ ಸುಬ್ರಮಣ್ಯ ಪೊಲೀಸ್ ಠಾಣೆಗೆ ಹೊಂದಿಕೊಂಡ ಪೊಲೀಸ್ ಕಾನ್ಸ್‌ಸ್ಟೇಬಲ್‌ನ ಸಾಕ್ಷ್ಯ (ಪ್ರಾ.ಸಾ.14) ಹಾಗೂ ಪ್ರಾ.ಸಾ.15ರ ಸಾಕ್ಷ್ಯ

(ಹೆಡ್ ಕಾನ್‌ಸ್ಟೇಬಲ್)ಗಳು ದಿನಾಂಕ 31.3.2011 (ಘಟನೆ ನಡೆದ ದಿನಾಂಕದಂದು) ರಂದು ಮಧ್ಯಾಹ್ನ 12.00 ಗಂಟೆಗೆ ಪೊಲೀಸ್ ಠಾಣೆಗೆ ಆಟೋ ರಿಕ್ಷಾ ಚಾಲಕರು ಹಾಗೂ ಹೆಚ್ಚಿನ ಸಂಖ್ಯೆಯ ಸಾರ್ವಜನಿಕರು ಆಪಾದಿತರಿಬ್ಬರನ್ನು ಕರೆತಂದಿದ್ದಾರೆಂಬುದನ್ನು ಬಹಿರಂಗಪಡಿಸುತ್ತವೆ. ಸದರಿ ಹೆಡ್ ಕಾನ್‌ಸ್ಟೇಬಲ್‌ನು (ಪ್ರಾ.ಸಾ.15) ಮಗುವು ಕಾಣೆಯಾಗಿರುವ ವಿಚಾರವನ್ನು ಕುರಿತಂತೆ ಆಪಾದಿತರಲ್ಲಿ ಪರಿಪ್ರಶ್ನಿಸಿದ್ದು, ಅಂಥ ಪರಿಪ್ರಶ್ನಿಸುವ ಸಮಯದಲ್ಲಿ ಆಪಾದಿತ ಮಿಲಿಟರಿಯವರು ನೀಡಿರುವ ಗುರುತಿನ ಚೀಟಿಯನ್ನು ಹಾಗು ವಿವಾಹ ಪ್ರಮಾಣ ಪತ್ರವನ್ನು ತೋರಿಸಿರುತ್ತಾರೆ. ಅವರನ್ನು ಮಧ್ಯಾಹ್ನ 3.00 ಗಂಟೆಯವರೆಗೂ ಪೊಲೀಸರು ಪರಿಪ್ರಶ್ನಿಸಿರುತ್ತಾರೆ. ಅಂತಿಮವಾಗಿ, ಆಪಾದಿತರ ಫೋನ್ ನಂಬರ್‌ಗಳನ್ನು ಪಿಡಬ್ಲ್ಯೂ.15 ತೆಗೆದುಕೊಂಡು, ತರುವಾಯ ಅವರನ್ನು ಬಿಟ್ಟಿರುತ್ತಾರೆ. ಪಿಡಬ್ಲ್ಯೂ.15ರ ಸಾಕ್ಷ್ಯವು, 31.3.2011ರಂದು ಕುಕ್ಕೆ ಸುಬ್ರಮಣ್ಯ ದೇವಾಲಯದ ಆವರಣದಲ್ಲಿ ಸುಮಾರು ಮಧ್ಯಾಹ್ನ 12.00 ಗಂಟೆ ವೇಳೆಗೆ ಆಪಾದಿತರು ಹಾಜರಿದ್ದರು ಹಾಗೂ ಅವರುಗಳನ್ನು ಪೊಲೀಸರು ಮಾತ್ರವಲ್ಲದೆ, ಸಾರ್ವಜನಿಕರೂ ಕೂಡ ಮಗುವು ಕಾಣಿಸದಿರುವುದರ ಬಗ್ಗೆ ಸಾಕಷ್ಟು ಪ್ರಶ್ನೆಗಳನ್ನು ಕೇಳಿರುತ್ತಾರೆಂಬುದನ್ನು ಸ್ಪಷ್ಟಪಡಿಸುತ್ತದೆ.

22. ಪ್ರಕರಣದ ಮೇಲೆ ಹೇಳಿದ ರುಜುವಾತಿನ ವಾಸ್ತವಾಂಶಗಳು ಹಾಗು ಸಂದರ್ಭಗಳ ಹಿನ್ನೆಲೆಯಲ್ಲಿ, ಅಧಿವಿಚಾರಣಾ ನ್ಯಾಯಾಲಯವು, ಆಪಾದಿತರನ್ನು ಖುಲಾಸೆ ಮಾಡಿರುವುದು ಸಮರ್ಥನೀಯವಾಗಿರುವುದಿಲ್ಲ. ಆದಾಗ್ಯೂ, ಆಪಾದಿತರು ಬಹುಶಃ ಮಗುವನ್ನು ಕೊಲೆ ಮಾಡುವ ಉದ್ದೇಶವನ್ನು ಹೊಂದಿರಲಿಲ್ಲವೆಂಬುದು ನಮಗೆ ಕಂಡು ಬಂದಿರುತ್ತದೆ. ಅವರು ಮಕ್ಕಳಿಲ್ಲದ ಯಾರಾದರು ದಂಪತಿಗಳು ಆ ಮಗುವನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಿ, ಸಾಕಿಕೊಳ್ಳುತ್ತಾರೆಂಬ ದೃಷ್ಟಿಯಿಂದ ಮಗುವನ್ನು ತೊರೆದು ಬಂದಿರುತ್ತಾರಾದರೂ, ಇದು ಭಾರತ ದಂಡ ಸಂಹಿತೆಯ 302ನೇ ಪ್ರಕರಣದಡಿಯಲ್ಲಿನ ಅಪರಾಧಕ್ಕೆ ಸಂಬಂಧಿಸಿದಂತೆ ಅಪರಾಧ ನಿರ್ಣೀತರಾಗಿರುತ್ತಾರೆ. ಅದರೊಂದಿಗೆ, ಅಂಥ ತೊರೆಯುವಿಕೆಯಿಂದಾಗಿ ಮಗುವು ಮರಣವನ್ನು ಅಪ್ಪಬಹುದೆಂಬ ಪ್ರಜ್ಞೆಯನ್ನು ಅವರು ಹೊಂದಿದ್ದರೆಂಬಷ್ಟರ ಮಟ್ಟಿಗೆ

ಭಾರತ ದಂಡ ಸಂಹಿತೆಯ 304ರ ಭಾಗ 2 ಹಾಗೂ 317 ಪ್ರಕರಣಗಳಡಿಯಲ್ಲಿ ಅಪರಾಧ ನಿರ್ಣೀತರಾಗಿರತಕ್ಕವರಾಗಿರುತ್ತಾರೆ.

23. ಶಿಕ್ಷೆಯ ಪ್ರಶ್ನೆ ಕುರಿತಂತೆ ಮಾನ್ಯ ವಕೀಲರುಗಳ ಅಹವಾಲನ್ನು ಆಲಿಸಿ, ಈ ಮುಂದಿನ ತೀರ್ಪನ್ನು ನಾವು ನೀಡಿರುತ್ತೇವೆ.

## ಆಜ್ಞೆ

ಸೆಷನ್ಸ್ ಪ್ರಕರಣ ಸಂ.79/2011ರಲ್ಲಿ 23.8.2011ರಂದು ಹೊರಡಿಸಿರುವ ಖುಲಾಸೆ ತೀರ್ಪು ಹಾಗೂ ಆದೇಶವನ್ನು ಈ ಮೂಲಕ ರದ್ದುಪಡಿಸಿರುತ್ತೇವೆ. ಆಪಾದಿತ ಸಂ.1 ಹಾಗೂ ಆಪಾದಿತ ಸಂ.2 ಇಬ್ಬರೂ ಆಪಾದಿತರು ಭಾರತ ದಂಡ ಸಂಹಿತೆಯ 34ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧಕ್ಕೆ ಸಂಬಂಧಿಸಿದ ಅಪರಾಧ ನಿರ್ಣೀತರಾಗಿರುತ್ತಾರೆ. ಅವರುಗಳಿಗೆ ಅವರ ಅಪರಾಧಗಳಿಗೆ ಸಂಬಂಧಿಸಿದಂತೆ, ಪ್ರತ್ಯೇಕವಾಗಿ 7 ವರ್ಷಗಳ ಅವಧಿಯ ಕಾರಾವಾಸ ಶಿಕ್ಷೆ ಹಾಗೂ ತಲಾ 1,00,000/– ರೂಪಾಯಿಗಳ ದಂಡವನ್ನು ಸಂದಾಯ ಮಾಡುವ ಶಿಕ್ಷೆಯನ್ನು ವಿಧಿಸಲಾಗಿರುತ್ತದೆ. ದಂಡದ ಸಂದಾಯಕ್ಕೆ ತಪ್ಪಿದಲ್ಲಿ, ಆಪಾದಿತರಿಬ್ಬರೂ ಮತ್ತೆ ಮೂರು ವರ್ಷಗಳ ಕಾರಾವಾಸ ಶಿಕ್ಷೆಗೆ ಗುರಿಯಾಗತಕ್ಕದ್ದಾಗಿರುತ್ತದೆ. ಎರಡೂ ಅಪರಾಧಗಳ ಸಂಬಂಧದಲ್ಲಿನ ಕಾರಾವಾಸ ಶಿಕ್ಷೆಯನ್ನು ಒಟ್ಟಾಗಿಯೇ ವಿಧಿಸತಕ್ಕದ್ದಾಗಿರುತ್ತದೆ. ಆಪಾದಿತರು (ಪ್ರತ್ಯರ್ಜಿದಾರರು ಈಗಾಗಲೇ ಅನುಭವಿಸಿರುವ ಕಾರಾವಾಸ ಶಿಕ್ಷೆಯ ಅವಧಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ 428ನೇ ಪ್ರಕರಣದ ಮೇರೆಗೆ ಕಳೆಯತಕ್ಕದ್ದು). ದಂಡದ ಇಡೀ ಮೊಬಲಗನ್ನು ವಸೂಲಿ ಮಾಡಿದಲ್ಲಿ, ಅದು ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.